सत्यमेव जयते

ಭಾರತ ಸರ್ಕಾರ

ಕಾನೂನು ಮತ್ತು ನ್ಯಾಯ ಮಂತ್ರಾಲಯ

# ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ, 1993

(1994ರ ಅಧಿನಿಯಮ ಸಂಖ್ಯೆ 10)

[ಏಪ್ರಿಲ್ 19, 2004 ರಂದು ಜಾರಿಯಲ್ಲಿದ್ದಂತೆ]

# THE PROTECTION OF HUMAN RIGHTS ACT, 1993

(Act No. 10 of 1994)

[As on 19th April 2004]

ಭಾರತ ಸರ್ಕಾರದ ಪರವಾಗಿ, ಕರ್ನಾಟಕ ಸರ್ಕಾರದ ಮುದ್ರಣ, ಲೇಖನ ಸಾಮಗ್ರಿ
ಮತ್ತು ಪ್ರಕಟಣೆಗಳ ನಿರ್ದೇಶಕರಿಂದ ಮುದ್ರಿತವಾಗಿ ಪ್ರಕಟಿತವಾಗಿದೆ.

2004

# ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ, 1993

(1994ರ ಅಧಿನಿಯಮ ಸಂಖ್ಯೆ 10)

[ಏಪ್ರಿಲ್ 19, 2004 ರಂದು ಜಾರಿಯಲ್ಲಿದ್ದಂತೆ]

# THE PROTECTION OF HUMAN RIGHTS ACT, 1993

(Act No. 10 of 1994)

[As on 19th April 2004]

# ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ, 1993

(1994ರ ಅಧಿನಿಯಮ ಸಂಖ್ಯೆ 10)

## ವಿಷಯಾನುಕ್ರಮಣಿಕೆ

ಪ್ರಕರಣಗಳು:

### ಅಧ್ಯಾಯ-I

### ಪ್ರಾರಂಭಿಕ


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ 1

2. ಪರಿಭಾಷೆಗಳು 1-2


### ಅಧ್ಯಾಯ-II

### ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ


3. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ರಚನೆ 2

4. ಅಧ್ಯಕ್ಷ ಮತ್ತು ಇತರ ಸದಸ್ಯರ ನೇಮಕಾತಿ 2-3

5. ಆಯೋಗದ ಸದಸ್ಯರನ್ನು ತೆಗೆದುಹಾಕುವಿಕೆ 3

6. ಸದಸ್ಯರ ಪದಾವಧಿ 3

7. ಕೆಲವು ಸಂದರ್ಭಗಳಲ್ಲಿ ಸದಸ್ಯನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸುವುದು 3

8. ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು 3

9. ಖಾಲಿ ಸ್ಥಾನ ಇತ್ಯಾದಿಗಳಿಂದಾಗಿ ಆಯೋಗದ ವ್ಯವಹರಣೆಗಳು ಅಸಿಂಧುವಾಗದಿರುವುದು 3-4

10. ಆಯೋಗವು ಕಾರ್ಯವಿಧಾನವನ್ನು ವಿನಿಯಮಿಸುವುದು 4

11. ಆಯೋಗದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ 4


### ಅಧ್ಯಾಯ-III

### ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು


12. ಆಯೋಗದ ಪ್ರಕಾರ್ಯಗಳು 4-5

13. ವಿಚಾರಣೆಗಳಿಗೆ ಸಂಬಂಧಿಸಿದ ಅಧಿಕಾರಗಳು 5

14. ತನಿಖೆ 6

15. ವ್ಯಕ್ತಿಗಳು ಆಯೋಗಕ್ಕೆ ನೀಡಿದ ಹೇಳಿಕೆ 6

16. ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ವ್ಯಕ್ತಿಗಳ ಅಹವಾಲು ಕೇಳುವುದು 6-7

## ಅಧ್ಯಾಯ-IV

## ಕಾರ್ಯವಿಧಾನ


| | | |
|---|---|---|
| 17. | ದೂರುಗಳ ವಿಚಾರಣೆ | 7 |
| 18. | ವಿಚಾರಣೆಯ ತರುವಾಯದ ಕ್ರಮಗಳು | 7 |
| 19. | ಸಶಸ್ತ್ರ ಬಲಗಳ ಸಂಬಂಧದಲ್ಲಿ ಕಾರ್ಯವಿಧಾನ | 7-8 |
| 20. | ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು | 8 |


## ಅಧ್ಯಾಯ-V

## ರಾಜ್ಯ ಮಾನವ ಹಕ್ಕುಗಳ ಆಯೋಗಗಳು


| | | |
|---|---|---|
| 21. | ರಾಜ್ಯ ಮಾನವ ಹಕ್ಕುಗಳ ಆಯೋಗಗಳ ರಚನೆ | 8-9 |
| 22. | ರಾಜ್ಯ ಆಯೋಗದ ಅಧ್ಯಕ್ಷ ಮತ್ತು ಇತರ ಸದಸ್ಯರ ನೇಮಕಾತಿ | 9 |
| 23. | ರಾಜ್ಯ ಆಯೋಗದ ಸದಸ್ಯರನ್ನು ತೆಗೆದುಹಾಕುವುದು | 9 |
| 24. | ರಾಜ್ಯ ಆಯೋಗದ ಸದಸ್ಯರ ಪದಾವಧಿ | 9-10 |
| 25. | ಕೆಲವು ಸಂದರ್ಭಗಳಲ್ಲಿ ಸದಸ್ಯನು ಸಭಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸುವುದು | 10 |
| 26. | ರಾಜ್ಯ ಆಯೋಗದ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು | 10 |
| 27. | ರಾಜ್ಯ ಆಯೋಗದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ | 10 |
| 28. | ರಾಜ್ಯ ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು | 10 |
| 29. | ರಾಜ್ಯ ಆಯೋಗಗಳಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಸಂಬಂಧಿಸಿದ ಕೆಲವು ಉಪಬಂಧಗಳ ಅನ್ವಯ | 10 |


## ಅಧ್ಯಾಯ-VI

## ಮಾನವ ಹಕ್ಕುಗಳ ನ್ಯಾಯಾಲಯಗಳು


| | | |
|---|---|---|
| 30. | ಮಾನವ ಹಕ್ಕುಗಳ ನ್ಯಾಯಾಲಯಗಳು | 11 |
| 31. | ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್ | 11 |


## ಅಧ್ಯಾಯ-VII

## ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ


| | | |
|---|---|---|
| 32. | ಕೇಂದ್ರ ಸರ್ಕಾರದಿಂದ ಅನುದಾನಗಳು | 11 |
| 33. | ರಾಜ್ಯ ಸರ್ಕಾರದಿಂದ ಅನುದಾನಗಳು | 11 |
| 34. | ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ | 11-12 |
| 35. | ರಾಜ್ಯ ಆಯೋಗದ ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ | 12 |

## ಅಧ್ಯಾಯ-VIII

### ಸಂಕೀರ್ಣ


| | | |
|---|---|---|
| 36. | ಆಯೋಗದ ಅಧಿಕಾರ ವ್ಯಾಪ್ತಿಗೆ ಒಳಪಡದ ವಿಷಯಗಳು | 12 |
| 37. | ವಿಶೇಷ ತನಿಖಾ ತಂಡಗಳ ರಚನೆ | 12 |
| 38. | ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ | 12 |
| 39. | ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು | 13 |
| 40. | ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ | 13 |
| 40ಎ. | ಪೂರ್ವಾನ್ವಯವಾಗಿ ನಿಯಮಗಳನ್ನು ರಚಿಸಲು ಅಧಿಕಾರ | 13 |
| 41. | ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ | 13-14 |
| 42. | ತೊಂದರೆಗಳ ನಿವಾರಣಾಧಿಕಾರ | 14 |
| 43. | ನಿರಸನ ಮತ್ತು ಉಳಿಸುವಿಕೆಗಳು | 14 |

# ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ, 1993

(1994ರ ಅಧಿನಿಯಮ ಸಂಖ್ಯೆ 10)

[8ನೇ ಜನವರಿ, 1994]

19.4.2004 ರಂದು ಜಾರಿಯಲ್ಲಿದ್ದಂತೆ ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ, 1993ರ ಕನ್ನಡ ಅಧಿಕೃತ ಪಾಠವು ಈ ಆವೃತ್ತಿಯಲ್ಲಿರುತ್ತದೆ. ಮತ್ತು ಇದನ್ನು 19.4.2004 ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 29ನೇ ಸಂಪುಟದ, 2ನೇ ಸಂಚಿಕೆಯಲ್ಲಿ 105 ರಿಂದ 119 ರವರೆಗಿನ ಪುಟಗಳಲ್ಲಿ ಪ್ರಕಟಿಸಲಾಗಿತ್ತು.

ಮಾನವ ಹಕ್ಕುಗಳ ರಕ್ಷಣೆಗಾಗಿ ರಾಷ್ಟ್ರೀಯ ಮಾನವ ಹಕ್ಕುಗಳ ಒಂದು ಆಯೋಗವನ್ನು, ರಾಜ್ಯಗಳಲ್ಲಿ ರಾಜ್ಯ ಮಾನವ ಹಕ್ಕುಗಳ ಆಯೋಗಗಳನ್ನು ಮತ್ತು ಮಾನವ ಹಕ್ಕುಗಳ ನ್ಯಾಯಾಲಯಗಳನ್ನು ರಚಿಸಲು ಮತ್ತು ಅದಕ್ಕೆ ಸಂಬಂಧಪಟ್ಟ ಅಥವಾ ಅದಕ್ಕೆ ಪ್ರಾಸಂಗಿಕವಾದ ವಿಷಯಗಳಿಗೆ ಉಪಬಂಧ ಕಲ್ಪಿಸುವ ಅಧಿನಿಯಮ.

ಭಾರತ ಗಣರಾಜ್ಯದ ನಲವತ್ನಾಲ್ಕನೇ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

## ಅಧ್ಯಾಯ - I

### ಪ್ರಾರಂಭಿಕ

1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:- (1) ಈ ಅಧಿನಿಯಮವನ್ನು ಮಾನವ ಹಕ್ಕುಗಳ ರಕ್ಷಣಾ ಅಧಿನಿಯಮ, 1993 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗತಕ್ಕದ್ದು:

ಪರಂತು, ಇದು ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ I ನೇ ಪಟ್ಟಿಯಲ್ಲಿ ಅಥವಾ III ನೇ ಪಟ್ಟಿಯಲ್ಲಿ ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯವಾಗುವಂತೆ ಪರಿಗಣಿಸಲಾಗಿರುವ ಯಾವುವೇ ನಮೂದನೆಗಳಿಗೆ ಸಂಬಂಧಿಸಿದ ವಿಷಯಗಳಿಗೆ ಸಂಬಂಧಪಡುವಷ್ಟರ ಮಟ್ಟಿಗೆ ಮಾತ್ರ ಆ ರಾಜ್ಯಕ್ಕೆ ಅನ್ವಯವಾಗತಕ್ಕದ್ದು.

(3) ಇದು 1993ರ ಸೆಪ್ಟೆಂಬರ್ 28ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

2. ಪರಿಭಾಷೆಗಳು:- ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) " ಸಶಸ್ತ್ರ ಬಲಗಳು " ಎಂದರೆ ನೌಕಾಬಲ, ಸೇನಾಬಲ ಮತ್ತು ವಾಯು ಬಲಗಳು ಮತ್ತು ಇದರಲ್ಲಿ ಒಕ್ಕೂಟದ ಯಾವುದೇ ಇತರ ಸಶಸ್ತ್ರ ಬಲಗಳು ಸೇರುತ್ತವೆ;

(ಬಿ) " ಅಧ್ಯಕ್ಷ " ಎಂದರೆ ಆಯೋಗದ ಅಧ್ಯಕ್ಷ ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗದ ಅಧ್ಯಕ್ಷ;

(ಸಿ) " ಆಯೋಗ " ಎಂದರೆ 3ನೇ ಪ್ರಕರಣದ ಮೇರೆಗೆ ರಚಿತವಾದ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ;

(ಡಿ) " ಮಾನವ ಹಕ್ಕುಗಳು " ಎಂದರೆ ಸಂವಿಧಾನದ ಮೂಲಕ ಖಾತರಿಪಡಿಸಲಾದ ಅಥವಾ ಅಂತರ ರಾಷ್ಟ್ರೀಯ ಒಡಂಬಡಿಕೆಗಳಲ್ಲಿ ಒಳಗೊಂಡಿರುವ ಮತ್ತು ಭಾರತದ ನ್ಯಾಯಾಲಯಗಳಿಂದ ಜಾರಿಗೊಳಿಸಬಹುದಾದ, ವ್ಯಕ್ತಿಯ ಜೀವನ, ಸ್ವಾತಂತ್ರ್ಯ, ಸಮಾನತೆ ಮತ್ತು ಘನತೆಗೆ ಸಂಬಂಧಿಸಿದ ಹಕ್ಕುಗಳು;

(ಇ) " ಮಾನವ ಹಕ್ಕುಗಳ ನ್ಯಾಯಾಲಯ " ಎಂದರೆ 30ನೇ ಪ್ರಕರಣದ ಮೇರೆಗೆ ನಿರ್ದಿಷ್ಟಪಡಿಸಿದ ಮಾನವ ಹಕ್ಕುಗಳ ನ್ಯಾಯಾಲಯ;

(ಎಫ್) " ಅಂತರ ರಾಷ್ಟ್ರೀಯ ಒಡಂಬಡಿಕೆಗಳು " ಎಂದರೆ 16ನೇ ಡಿಸೆಂಬರ್ 1966 ರಂದು ವಿಶ್ವ ಸಂಸ್ಥೆಯ ಮಹಾ ಸಭೆಯು ಅಂಗೀಕರಿಸಿದ ಸಿವಿಲ್ ಮತ್ತು ರಾಜಕೀಯ ಹಕ್ಕುಗಳ ಅಂತರ ರಾಷ್ಟ್ರೀಯ ಒಡಂಬಡಿಕೆ ಹಾಗೂ ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಹಕ್ಕುಗಳ ಅಂತರರಾಷ್ಟ್ರೀಯ ಒಡಂಬಡಿಕೆ;

(ಜಿ) " ಸದಸ್ಯ " ಎಂದರೆ ಆಯೋಗದ ಸದಸ್ಯ ಅಥವಾ ಸಂದರ್ಭಾನುಸಾರ ರಾಜ್ಯ ಆಯೋಗದ ಸದಸ್ಯ ಮತ್ತು ಇದು ಅಧ್ಯಕ್ಷನನ್ನು ಒಳಗೊಳ್ಳುತ್ತದೆ;

(ಹೆಚ್) " ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ " ಎಂದರೆ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ ಅಧಿನಿಯಮ, 1992ರ (1992ರ 19) 3ನೇ ಪ್ರಕರಣದ ಮೇರೆಗೆ ರಚಿತವಾದ ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗ;

(ಐ) " ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ " ಎಂದರೆ ಸಂವಿಧಾನದ 338ನೇ ಅನುಚ್ಛೇದದಲ್ಲಿ ಉಲ್ಲೇಖಿತವಾದ ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗ;

(ಜೆ) "ರಾಷ್ಟ್ರೀಯ ಮಹಿಳಾ ಆಯೋಗ " ಎಂದರೆ ರಾಷ್ಟ್ರೀಯ ಮಹಿಳಾ ಆಯೋಗ ಅಧಿನಿಯಮ, 1990ರ (1990ರ 20) 3ನೇ ಪ್ರಕರಣದ ಮೇರೆಗೆ ರಚಿತವಾದ ರಾಷ್ಟ್ರೀಯ ಮಹಿಳಾ ಆಯೋಗ;

(ಕೆ) " ಅಧಿಸೂಚನೆ " ಎಂದರೆ ರಾಜಪತ್ರದಲ್ಲಿ ಪ್ರಕಟಿಸಿದ ಅಧಿಸೂಚನೆ;

(ಎಲ್) " ನಿಯಮಿಸಲಾದುದು " ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಎಂ) "ಲೋಕ ನೌಕರ" ಪದವು ಭಾರತ ದಂಡ ಸಂಹಿತೆಯ 21ನೇ ಪ್ರಕರಣದಲ್ಲಿ (1860ರ 45) ಅದಕ್ಕೆ ಕೊಟ್ಟಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(ಎನ್) " ರಾಜ್ಯ ಆಯೋಗ " ಎಂದರೆ 21ನೇ ಪ್ರಕರಣದ ಮೇರೆಗೆ ರಚಿತವಾದ ರಾಜ್ಯ ಮಾನವ ಹಕ್ಕುಗಳ ಆಯೋಗ.

(2) ಜಮ್ಮು ಮತ್ತು ಕಾಶ್ಮೀರ ರಾಜ್ಯದಲ್ಲಿ ಜಾರಿಯಲ್ಲಿರದ ಕಾನೂನಿಗೆ ಸಂಬಂಧಿಸಿದಂತೆ ಈ ಅಧಿನಿಯಮದಲ್ಲಿನ ಯಾವುದೇ ಉಲ್ಲೇಖವನ್ನು ಆ ರಾಜ್ಯಕ್ಕೆ ಸಂಬಂಧಪಟ್ಟಂತೆ ಆ ರಾಜ್ಯದಲ್ಲಿ ಜಾರಿಯಲ್ಲಿರುವ ಯಾವುದೇ ಸಂವಾದಿ ಕಾನೂನಿಗೆ ಮಾಡಿರುವ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.

## ಅಧ್ಯಾಯ - II

## ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ

3. ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ ರಚನೆ:- (1) ಕೇಂದ್ರ ಸರ್ಕಾರವು ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಎಂದು ಕರೆಯಲಾಗುವ ಒಂದು ನಿಕಾಯವನ್ನು ಈ ಅಧಿನಿಯಮದ ಮೇರೆಗೆ ಅದಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ವಹಿಸಿಕೊಟ್ಟಿರುವ ಪ್ರಕಾರ್ಯಗಳನ್ನು ನಿರ್ವಹಿಸಲು ರಚಿಸತಕ್ಕದ್ದು.

(2) ಆಯೋಗವು, ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಸರ್ವೋಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿದ್ದ ಒಬ್ಬ ಅಧ್ಯಕ್ಷ;

(ಬಿ) ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಒಬ್ಬ ಸದಸ್ಯ;

(ಸಿ) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಒಬ್ಬ ಸದಸ್ಯ;

(ಡಿ) ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ತಿಳಿವಳಿಕೆಯುಳ್ಳ ಅಥವಾ ವ್ಯವಹಾರಿಕ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ನೇಮಕ ಮಾಡಿಕೊಳ್ಳಬೇಕಾಗಿರುವ ಇಬ್ಬರು ಸದಸ್ಯರು.

(3) ರಾಷ್ಟ್ರೀಯ ಅಲ್ಪಸಂಖ್ಯಾತರ ಆಯೋಗದ, ರಾಷ್ಟ್ರೀಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಯೋಗದ ಮತ್ತು ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರುಗಳನ್ನು 12ನೇ ಪ್ರಕರಣದ (ಬಿ) ಯಿಂದ (ಜೆ) ವರೆಗಿನ ಖಂಡಗಳಲ್ಲಿ ನಿರ್ದಿಷ್ಟಪಡಿಸಿರುವ ಪ್ರಕಾರ್ಯಗಳನ್ನು ನಿರ್ವಹಿಸುವುದಕ್ಕಾಗಿ ಆಯೋಗದ ಸದಸ್ಯರು ಎಂಬುದಾಗಿ ಭಾವಿಸತಕ್ಕದ್ದು.

(4) ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಒಬ್ಬ ಮಹಾಕಾರ್ಯದರ್ಶಿ ಇರತಕ್ಕದ್ದು ಮತ್ತು ಅವನು ಆಯೋಗವು ತನಗೆ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(5) ಆಯೋಗದ ಕೇಂದ್ರ ಕಾರ್ಯಸ್ಥಾನವು ದೆಹಲಿಯಲ್ಲಿರತಕ್ಕದ್ದು ಮತ್ತು ಆಯೋಗವು ಕೇಂದ್ರ ಸರ್ಕಾರದ ಪೂರ್ವಾನುಮೋದನೆ ಪಡೆದು ಭಾರತದ ಇತರ ಸ್ಥಳಗಳಲ್ಲಿ ಕಚೇರಿಗಳನ್ನು ಸ್ಥಾಪಿಸಬಹುದು.

4. ಅಧ್ಯಕ್ಷ ಮತ್ತು ಇತರ ಸದಸ್ಯರ ನೇಮಕಾತಿ:- (1) ಅಧ್ಯಕ್ಷ ಮತ್ತು ಇತರ ಸದಸ್ಯರನ್ನು ರಾಷ್ಟ್ರಪತಿಯು ತನ್ನ ಸಹಿ ಮತ್ತು ಮೊಹರು ಹಾಕಿರುವ ವಾರಂಟಿನ ಮೂಲಕ ನೇಮಿಸತಕ್ಕದ್ದು:

ಪರಂತು, ಈ ಉಪಪ್ರಕರಣದ ಮೇರೆಗಿನ ಪ್ರತಿಯೊಂದು ನೇಮಕಾತಿಯನ್ನು ಈ ಕೆಳಕಂಡವರನ್ನೊಳಗೊಂಡ ಸಮಿತಿಯ ಶಿಫಾರಸುಗಳನ್ನು ಪಡೆದುಕೊಂಡ ನಂತರ ಮಾಡತಕ್ಕದ್ದು, ಎಂದರೆ:-

(ಎ) ಪ್ರಧಾನ ಮಂತ್ರಿ : ಅಧ್ಯಕ್ಷ ;

(ಬಿ) ಲೋಕಸಭಾ ಅಧ್ಯಕ್ಷ : ಸದಸ್ಯ ;

(ಸಿ) ಭಾರತ ಸರ್ಕಾರದ ಗೃಹ ವ್ಯವಹಾರಗಳ ಮಂತ್ರಾಲಯದ ಪ್ರಭಾರದಲ್ಲಿರುವ ಸಚಿವ : ಸದಸ್ಯ ;

(ಡಿ) ಲೋಕಸಭೆಯ ವಿರೋಧ ಪಕ್ಷದ ನಾಯಕ : ಸದಸ್ಯ ;

(ಇ) ರಾಜ್ಯ ಸಭೆಯ ವಿರೋಧ ಪಕ್ಷದ ನಾಯಕ : ಸದಸ್ಯ ;

(ಎಫ್) ರಾಜ್ಯ ಸಭೆಯ ಉಪ-ಸಭಾಪತಿ : ಸದಸ್ಯ :

ಮತ್ತೂ ಪರಂತು, ಭಾರತದ ಮುಖ್ಯ ನ್ಯಾಯಮೂರ್ತಿಯೊಂದಿಗೆ ಸಮಾಲೋಚಿಸಿದ ಹೊರತು ಸರ್ವೋಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶನನ್ನಾಗಲಿ ಅಥವಾ ಉಚ್ಚ ನ್ಯಾಯಾಲಯದ ಹಾಲಿ ಮುಖ್ಯ ನ್ಯಾಯಮೂರ್ತಿಯನ್ನಾಗಲಿ ನೇಮಿಸತಕ್ಕದ್ದಲ್ಲ.

(2) ಸಮಿತಿಯಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಕಾರಣ ಮಾತ್ರದಿಂದ ಅಧ್ಯಕ್ಷನ ಅಥವಾ ಸದಸ್ಯರ ನೇಮಕಾತಿಯು ಅಸಿಂಧುವಾಗತಕ್ಕದ್ದಲ್ಲ.

5. ಆಯೋಗದ ಸದಸ್ಯರನ್ನು ತೆಗೆದುಹಾಕುವಿಕೆ:- (1) (2)ನೇ ಉಪ-ಪ್ರಕರಣದ ಉಪಬಂಧಗಳಿಗೊಳಪಟ್ಟು ಆಯೋಗದ ಅಧ್ಯಕ್ಷ ಅಥವಾ ಯಾರೇ ಇತರ ಸದಸ್ಯರ ದುರ್ವರ್ತನೆ ಅಥವಾ ಅಸಮರ್ಥತೆಯ ಸಂಬಂಧದಲ್ಲಿ ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖ ಮಾಡಿದ ತರುವಾಯ, ಸರ್ವೋಚ್ಚ ನ್ಯಾಯಾಲಯವು ಆ ಬಗ್ಗೆ ನಿಯಮಿಸಲಾದ ಕಾರ್ಯವಿಧಾನಕ್ಕನುಸಾರವಾಗಿ ವಿಚಾರಣೆ ನಡೆಸಿದ ನಂತರ ರುಜುವಾತಾದ ದುರ್ವರ್ತನೆಯ ಕಾರಣದ ಮೇಲೆ ಅಥವಾ ಅಸಮರ್ಥತೆಯ ಕಾರಣದ ಮೇಲೆ ಅಧ್ಯಕ್ಷನನ್ನು ಅಥವಾ ಸಂದರ್ಭಾನುಸಾರ, ಇತರ ಸದಸ್ಯನನ್ನು ಅವನ ಪದದಿಂದ ತೆಗೆದುಹಾಕತಕ್ಕದ್ದೆಂದು ಮಾಡಿದ ವರದಿಯ ಮೇರೆಗೆ ರಾಷ್ಟ್ರಪತಿಯ ಆದೇಶದ ಮೂಲಕ ಮಾತ್ರ ಅವರನ್ನು ತೆಗೆದುಹಾಕತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿ ಏನೇ ಇದ್ದರೂ, ಅಧ್ಯಕ್ಷನು ಅಥವಾ ಸಂದರ್ಭಾನುಸಾರ, ಅಂಥ ಇತರ ಸದಸ್ಯನು,-

(ಎ) ದಿವಾಳಿಯೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ತನ್ನ ಪದಾವಧಿಯಲ್ಲಿ ತನ್ನ ಪದದ ಕರ್ತವ್ಯಗಳ ಹೊರತು ವೇತನ ಪಡೆಯುವಂಥ ಯಾವುದೇ ಉದ್ಯೋಗದಲ್ಲಿ ತೊಡಗಿದ್ದರೆ;

(ಸಿ) ಮಾನಸಿಕ ಅಥವಾ ದೈಹಿಕ ಅಸ್ವಸ್ಥತೆಯ ಕಾರಣದಿಂದ ಪದದಲ್ಲಿ ಮುಂದುವರೆಯಲು ಅನರ್ಹನಾಗಿದ್ದರೆ; ಅಥವಾ

(ಡಿ) ಅಸ್ವಸ್ಥಚಿತ್ತನಾಗಿದ್ದರೆ ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಇ) ರಾಷ್ಟ್ರಪತಿಯ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ

- ರಾಷ್ಟ್ರಪತಿಯು ಆದೇಶದ ಮೂಲಕ ಅಧ್ಯಕ್ಷ ಅಥವಾ ಯಾರೇ ಇತರ ಸದಸ್ಯನನ್ನು, ಅವನ ಪದದಿಂದ ತೆಗೆದುಹಾಕಬಹುದು.

6. ಸದಸ್ಯರ ಪದಾವಧಿ:- (1) ಅಧ್ಯಕ್ಷನಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ತನ್ನ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಎಪ್ಪತ್ತು ವರ್ಷಗಳ ವಯಸ್ಸಾಗುವವರೆಗೆ - ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆ ಪದದಲ್ಲಿರತಕ್ಕದ್ದು.

(2) ಸದಸ್ಯನಾಗಿ ನೇಮಕಗೊಂಡ ವ್ಯಕ್ತಿಯು ತನ್ನ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಆ ಪದದಲ್ಲಿರತಕ್ಕದ್ದು ಮತ್ತು ನಂತರದ ಐದು ವರ್ಷಗಳ ಮತ್ತೊಂದು ಅವಧಿಗೆ ಪುನರ್ ನೇಮಕ ಹೊಂದಲು ಅರ್ಹನಾಗಿರತಕ್ಕದ್ದು:

ಪರಂತು, ಯಾರೇ ಸದಸ್ಯನು ಎಪ್ಪತ್ತು ವರ್ಷ ವಯಸ್ಸಾದ ನಂತರ ಆ ಪದವನ್ನು ಧಾರಣ ಮಾಡತಕ್ಕದ್ದಲ್ಲ.

(3) ಅಧ್ಯಕ್ಷನಾಗಲಿ ಅಥವಾ ಸದಸ್ಯನಾಗಲಿ ಪದವನ್ನು ಧಾರಣ ಮಾಡಿರುವುದು ನಿಂತುಹೋದ ತರುವಾಯ ಭಾರತ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಡಿಯಲ್ಲಿ ಯಾವುದೇ ಉದ್ಯೋಗಕ್ಕೆ ಅರ್ಹನಾಗಿರತಕ್ಕದ್ದಲ್ಲ.

7. ಕೆಲವು ಸಂದರ್ಭಗಳಲ್ಲಿ ಸದಸ್ಯನು ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸುವುದು:- (1) ಅಧ್ಯಕ್ಷನ ಮರಣ, ರಾಜೀನಾಮೆ ಅಥವಾ ಅನ್ಯ ಕಾರಣದಿಂದ ಅವನ ಪದವು ಖಾಲಿಯಾಗಿರುವ ಸಂದರ್ಭದಲ್ಲಿ ರಾಷ್ಟ್ರಪತಿಯು ಅಧಿಸೂಚನೆಯ ಮೂಲಕ ಅಂಥ ಖಾಲಿ ಸ್ಥಾನವನ್ನು ತುಂಬುವುದಕ್ಕಾಗಿ ಹೊಸ ಅಧ್ಯಕ್ಷನನ್ನು ನೇಮಕ ಮಾಡುವವರೆಗೆ ಅಧ್ಯಕ್ಷನಾಗಿ ಕಾರ್ಯನಿರ್ವಹಿಸಲು ಸದಸ್ಯರ ಪೈಕಿ ಒಬ್ಬನನ್ನು ಅಧಿಕೃತಗೊಳಿಸಬಹುದು.

(2) ಅಧ್ಯಕ್ಷನು ರಜೆಯ ಕಾರಣದಿಂದ ಅಥವಾ ಅನ್ಯಥಾ ಗೈರು ಹಾಜರಾಗಿದ್ದು ತನ್ನ ಪ್ರಕಾರ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಿರುವಾಗ ರಾಷ್ಟ್ರಪತಿಯು ಅಧಿಸೂಚನೆಯ ಮೂಲಕ ಈ ಸಂಬಂಧದಲ್ಲಿ ಅಧಿಕೃತಗೊಳಿಸಲಾದ ಸದಸ್ಯರ ಪೈಕಿ ಒಬ್ಬನು, ಅಧ್ಯಕ್ಷನ ಕರ್ತವ್ಯಗಳನ್ನು ಪುನಃ ವಹಿಸಿಕೊಳ್ಳುವ ದಿನಾಂಕದವರೆಗೆ ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

8. ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು:- ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಸದಸ್ಯನ ಸಂಬಳ ಮತ್ತು ಭತ್ಯೆಯನ್ನಾಗಲಿ ಅಥವಾ ಅವನ ಇತರ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನಾಗಲಿ ಅವನ ನೇಮಕಾತಿಯ ನಂತರ ಅವನಿಗೆ ಅನಾನುಕೂಲವಾಗುವ ಹಾಗೆ ವ್ಯತ್ಯಸ್ತಗೊಳಿಸತಕ್ಕದ್ದಲ್ಲ.

9. ಖಾಲಿ ಸ್ಥಾನ ಇತ್ಯಾದಿಗಳಿಂದಾಗಿ ಆಯೋಗದ ವ್ಯವಹರಣೆಗಳು ಅಸಿಂಧುವಾಗದಿರುವುದು:- ಆಯೋಗದಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಅಥವಾ ಆಯೋಗದ ರಚನೆಯಲ್ಲಿ ಯಾವುದೇ ದೋಷ ಇರುವ ಕಾರಣ ಮಾತ್ರದಿಂದ ಆಯೋಗದ ಯಾವುದೇ ಕಾರ್ಯ ಅಥವಾ ವ್ಯವಹರಣೆಯನ್ನು ಪ್ರಶ್ನಿಸತಕ್ಕದ್ದಲ್ಲ ಅಥವಾ ಅಸಿಂಧುಗೊಳಿಸತಕ್ಕದ್ದಲ್ಲ.

10. ಆಯೋಗವು ಕಾರ್ಯವಿಧಾನವನ್ನು ವಿನಿಯಮಿಸುವುದು:- (1) ಅಧ್ಯಕ್ಷನು ಸೂಕ್ತವೆಂದು ಭಾವಿಸಬಹುದಾದಂಥ ಸಮಯ ಮತ್ತು ಸ್ಥಳದಲ್ಲಿ ಆಯೋಗವು ಸಭೆಸೇರತಕ್ಕದ್ದು.

(2) ಆಯೋಗವು ತನ್ನದೇ ಆದ ಕಾರ್ಯವಿಧಾನವನ್ನು ವಿನಿಯಮಿಸತಕ್ಕದ್ದು.

(3) ಆಯೋಗದ ಎಲ್ಲ ಆದೇಶಗಳು ಮತ್ತು ನಿರ್ಣಯಗಳನ್ನು ಆಯೋಗದ ಮಹಾ ಕಾರ್ಯದರ್ಶಿ ಅಥವಾ ಈ ಸಂಬಂಧದಲ್ಲಿ ಅಧ್ಯಕ್ಷನಿಂದ ಕ್ರಮಬದ್ಧವಾಗಿ ಅಧಿಕೃತಗೊಂಡ ಯಾರೇ ಇತರ ಅಧಿಕಾರಿಯು ಅಧಿಪ್ರಮಾಣಿಸತಕ್ಕದ್ದು.

11. ಆಯೋಗದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ:- (1) ಕೇಂದ್ರ ಸರ್ಕಾರವು ಆಯೋಗಕ್ಕೆ, ಈ ಕೆಳಕಂಡವರನ್ನು ಒದಗಿಸತಕ್ಕದ್ದು, ಎಂದರೆ:-

(ಎ) ಭಾರತ ಸರ್ಕಾರದ ಕಾರ್ಯದರ್ಶಿ ದರ್ಜೆಯ ಒಬ್ಬ ಅಧಿಕಾರಿ, ಅವನು ಆಯೋಗದ ಮಹಾ ಕಾರ್ಯದರ್ಶಿಯಾಗಿರತಕ್ಕದ್ದು; ಮತ್ತು

(ಬಿ) ಪೊಲೀಸ್ ಮಹಾ ನಿರ್ದೇಶಕನ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯ ಅಧೀನದಲ್ಲಿ ಪೊಲೀಸ್ ಮತ್ತು ತನಿಖಾ ಸಿಬ್ಬಂದಿ ಹಾಗೂ ಆಯೋಗದ ಪ್ರಕಾರ್ಯಗಳನ್ನು ದಕ್ಷ ರೀತಿಯಲ್ಲಿ ನಿರ್ವಹಿಸಲು ಅವಶ್ಯವಿರಬಹುದಾದಂಥ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ.

(2) ಕೇಂದ್ರ ಸರ್ಕಾರವು ಈ ಸಂಬಂಧದಲ್ಲಿ ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು, ಆಯೋಗವು, ತಾನು ಅವಶ್ಯವೆಂದು ಭಾವಿಸಬಹುದಾದಂಥ ಇತರ ಆಡಳಿತಾತ್ಮಕ, ತಾಂತ್ರಿಕ ಮತ್ತು ವೈಜ್ಞಾನಿಕ ಸಿಬ್ಬಂದಿಯನ್ನು ನೇಮಿಸಬಹುದು.

(3) (2)ನೇ ಉಪ-ಪ್ರಕರಣದ ಮೇರೆಗೆ ನೇಮಕಗೊಂಡ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿ ವರ್ಗದ ಸಂಬಳಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

## ಅಧ್ಯಾಯ - III

## ಆಯೋಗದ ಪ್ರಕಾರ್ಯಗಳು ಮತ್ತು ಅಧಿಕಾರಗಳು

12. ಆಯೋಗದ ಪ್ರಕಾರ್ಯಗಳು:- ಆಯೋಗವು ಈ ಕೆಳಕಂಡ ಎಲ್ಲ ಪ್ರಕಾರ್ಯಗಳನ್ನು ಅಥವಾ ಆ ಪೈಕಿ ಯಾವುದೇ ಪ್ರಕಾರ್ಯವನ್ನು ನೆರವೇರಿಸತಕ್ಕದ್ದು, ಎಂದರೆ:-

(ಎ) ತಾನಾಗಿಯೇ ಅಥವಾ ಸಂಕಷ್ಟಕ್ಕೊಳಗಾದ ವ್ಯಕ್ತಿ ಅಥವಾ ಅವನ ಪರವಾಗಿ ಯಾರೇ ವ್ಯಕ್ತಿಯು ಅರ್ಜಿ ಸಲ್ಲಿಸಿದಾಗ,-

(i) ಮಾನವ ಹಕ್ಕುಗಳ ಉಲ್ಲಂಘನೆ ಅಥವಾ ಅದರ ದುಷ್ಪ್ರೇರಣೆ ಬಗೆಗಿನ; ಅಥವಾ

(ii) ಲೋಕ ನೌಕರನಿಂದ ಅಂಥ ಉಲ್ಲಂಘನೆಯನ್ನು ತಡೆಯುವಲ್ಲಿ ಆದ ನಿರ್ಲಕ್ಷ್ಯದ ಬಗೆಗಿನ

- ದೂರಿನ ವಿಚಾರಣೆ ನಡೆಸುವುದು;

(ಬಿ) ನ್ಯಾಯಾಲಯದ ಮುಂದೆ ಇತ್ಯರ್ಥದಲ್ಲಿರುವ, ಮಾನವ ಹಕ್ಕುಗಳ ಉಲ್ಲಂಘನೆಯ ಯಾವುದೇ ಆಪಾದನೆಯನ್ನು ಒಳಗೊಂಡಿರುವಂಥ ಯಾವುದೇ ವ್ಯವಹರಣೆಯಲ್ಲಿ, ಅಂಥ ನ್ಯಾಯಾಲಯದ ಅನುಮೋದನೆ ಪಡೆದು ಮಧ್ಯ ಪ್ರವೇಶಿಸುವುದು;

(ಸಿ) ರಾಜ್ಯ ಸರ್ಕಾರದ ನಿಯಂತ್ರಣದಲ್ಲಿರುವ ಯಾವುದೇ ಕಾರಾಗೃಹ ಅಥವಾ ಯಾವುದೇ ಇತರ ಸಂಸ್ಥೆಯಲ್ಲಿ ಚಿಕಿತ್ಸೆ, ಸುಧಾರಣೆ ಅಥವಾ ರಕ್ಷಣಾ ಉದ್ದೇಶಗಳಿಗಾಗಿ ಬಂಧಿಸಿಟ್ಟಿರುವ ಅಥವಾ ತಡೆಹಿಡಿದಿಟ್ಟಿರುವ ವ್ಯಕ್ತಿಗಳ ಜೀವನದ ಸ್ಥಿತಿಗತಿಗಳನ್ನು ಅಧ್ಯಯನ ಮಾಡಲು ಮತ್ತು ಆ ಬಗ್ಗೆ ಶಿಫಾರಸುಗಳನ್ನು ಮಾಡಲು ರಾಜ್ಯ ಸರ್ಕಾರಕ್ಕೆ ಮಾಹಿತಿ ನೀಡಿ ಅಂಥ ಜೈಲು ಅಥವಾ ಸಂಸ್ಥೆಗೆ ಭೇಟಿ ನೀಡುವುದು;

(ಡಿ) ಮಾನವ ಹಕ್ಕುಗಳ ರಕ್ಷಣೆಗಾಗಿ ಸಂವಿಧಾನದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೂಲಕ ಅಥವಾ ಅದರ ಮೇರೆಗೆ ಒದಗಿಸಲಾದ ರಕ್ಷಣಾ ಕ್ರಮಗಳನ್ನು ಪರಿಶೀಲಿಸುವುದು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಕ್ರಮಗಳನ್ನು ಶಿಫಾರಸು ಮಾಡುವುದು;

(ಇ) ಮಾನವ ಹಕ್ಕುಗಳನ್ನು ಅನುಭೋಗಿಸಲು ಅಡ್ಡಿಯುಂಟುಮಾಡುವ ಭಯೋತ್ಪಾದಕ ಕೃತ್ಯಗಳೂ ಸೇರಿದಂತೆ ಅಂಥ ವಿಷಯಗಳನ್ನು ಪರಿಶೀಲಿಸುವುದು ಮತ್ತು ಯುಕ್ತ ಪರಿಹಾರ ಕ್ರಮಗಳನ್ನು ಶಿಫಾರಸು ಮಾಡುವುದು;

(ಎಫ್) ಮಾನವ ಹಕ್ಕುಗಳ ಸಂಬಂಧದ ಕೌಲುಗಳನ್ನು ಮತ್ತು ಇತರ ಅಂತರರಾಷ್ಟ್ರೀಯ ಲಿಖಿತಗಳನ್ನು ಅಧ್ಯಯನ ಮಾಡುವುದು ಮತ್ತು ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಶಿಫಾರಸುಗಳನ್ನು ಮಾಡುವುದು;

(ಜಿ) ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಸಂಶೋಧನೆ ಕೈಗೊಳ್ಳುವುದು ಮತ್ತು ಅಭಿವೃದ್ಧಿ ಪಡಿಸುವುದು;

(ಹೆಚ್) ಸಮಾಜದ ವಿವಿಧ ವರ್ಗಗಳಲ್ಲಿ ಮಾನವ ಹಕ್ಕುಗಳ ಬಗ್ಗೆ ಅರಿವನ್ನು ಮೂಡಿಸುವುದು ಮತ್ತು ಪ್ರಕಟಣೆಗಳು, ಸಂವಹನ ಮಾಧ್ಯಮಗಳು, ವಿಚಾರ ಗೋಷ್ಠಿಗಳು ಮತ್ತು ಲಭ್ಯವಿರುವ ಇತರ ಸಾಧನಗಳ ಮೂಲಕ ಈ ಹಕ್ಕುಗಳ ರಕ್ಷಣೆಗಾಗಿ ಲಭ್ಯವಿರುವ ಸುರಕ್ಷಾ ಕ್ರಮಗಳ ಬಗ್ಗೆ ತಿಳಿವಳಿಕೆಯನ್ನು ಹೆಚ್ಚಿಸುವುದು;

(ಐ) ಮಾನವ ಹಕ್ಕುಗಳ ಕ್ಷೇತ್ರದಲ್ಲಿ ಕಾರ್ಯನಿರತರಾಗಿರುವ ಸರ್ಕಾರೇತರ ಸಂಘಟನೆಗಳ ಮತ್ತು ಸಂಸ್ಥೆಗಳ ಪ್ರಯತ್ನಗಳಿಗೆ ಪ್ರೋತ್ಸಾಹ ನೀಡುವುದು;

(ಜೆ) ಮಾನವ ಹಕ್ಕುಗಳ ಸಂವರ್ಧನೆಗಾಗಿ ತಾನು ಅವಶ್ಯವೆಂದು ಭಾವಿಸುವಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸುವುದು.

13. ವಿಚಾರಣೆಗಳಿಗೆ ಸಂಬಂಧಿಸಿದ ಅಧಿಕಾರಗಳು:- (1) ಆಯೋಗವು ಈ ಅಧಿನಿಯಮದ ಮೇರೆಗೆ ದೂರುಗಳ ಬಗ್ಗೆ ವಿಚಾರಣೆ ನಡೆಸುವಾಗ, ವಿಶೇಷವಾಗಿ ಈ ಕೆಳಕಂಡ ವಿಷಯಗಳ ಸಂಬಂಧದಲ್ಲಿ, ದಾವೆಯನ್ನು ವಿಚಾರಣೆ ಮಾಡುವಾಗ ಸಿವಿಲ್ ನ್ಯಾಯಾಲಯವು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಮೇರೆಗೆ ಹೊಂದಿರುವ ಎಲ್ಲ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಸಾಕ್ಷಿಗಳನ್ನು ಸಮನು ಮಾಡುವುದು ಮತ್ತು ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣ ಮಾಡಿಸಿ ಅವರನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸುವಂತೆ ಮತ್ತು ಅದನ್ನು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಅಫಿಡವಿಟ್‌ಗಳ ಮೂಲಕ ಸಾಕ್ಷ್ಯವನ್ನು ಪಡೆಯುವುದು;

(ಡಿ) ಯಾವುದೇ ನ್ಯಾಯಾಲಯ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿಗಳ ಅಥವಾ ದಸ್ತಾವೇಜುಗಳ ಪರೀಕ್ಷೆಗಾಗಿ ಕಮಿಷನುಗಳನ್ನು ಹೊರಡಿಸುವುದು;

(ಎಫ್) ನಿಯಮಿಸಬಹುದಾದ ಯಾವುದೇ ಇತರ ವಿಷಯ.

(2) ಆಯೋಗವು, ಯಾರೇ ವ್ಯಕ್ತಿಯನ್ನು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಆ ವ್ಯಕ್ತಿಯು ಕ್ಲೇಮು ಮಾಡಬಹುದಾದ ಯಾವುದೇ ವಿಶೇಷ ಹಕ್ಕಿಗೆ ಒಳಪಟ್ಟು, ವಿಚಾರಣಾ ವಸ್ತು ವಿಷಯಕ್ಕೆ ಉಪಯುಕ್ತವೆಂದು ಅಥವಾ ಸುಸಂಬದ್ಧವೆಂದು ಆಯೋಗವು ಅಭಿಪ್ರಾಯಪಡಬಹುದಾದಂಥ ಅಂಶಗಳು ಅಥವಾ ವಿಷಯಗಳ ಬಗ್ಗೆ ಮಾಹಿತಿಯನ್ನು ಒದಗಿಸಬೇಕೆಂದು ಅಗತ್ಯಪಡಿಸುವ ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಹಾಗೆ ಅಗತ್ಯಪಡಿಸಲಾದ ಯಾರೇ ವ್ಯಕ್ತಿಯು ಭಾರತ ದಂಡ ಸಂಹಿತೆಯ (1860ರ 45) 176ನೇ ಪ್ರಕರಣ ಮತ್ತು 177ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಅಂಥ ಮಾಹಿತಿಯನ್ನು ಒದಗಿಸಲು ಕಾನೂನು ಸಮ್ಮತವಾಗಿ ಬದ್ಧನಾಗಿರುವನೆಂದು ಭಾವಿಸತಕ್ಕದ್ದು.

(3) ಆಯೋಗವು ಅಥವಾ ಈ ಸಂಬಂಧದಲ್ಲಿ ಆಯೋಗದಿಂದ ವಿಶೇಷವಾಗಿ ಅಧಿಕೃತನಾದ ಗೆಜೆಟೆಡ್ ಅಧಿಕಾರಿಯ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಯಾರೇ ಇತರ ಅಧಿಕಾರಿಯು, ವಿಚಾರಣಾ ವಸ್ತು ವಿಷಯಕ್ಕೆ ಸಂಬಂಧಪಟ್ಟ ಯಾವುದೇ

ದಸ್ತಾವೇಜು ಯಾವುದೇ ಕಟ್ಟಡದಲ್ಲಿ ಅಥವಾ ಸ್ಥಳದಲ್ಲಿ ಸಿಕ್ಕಬಹುದೆಂದು ಆಯೋಗವು ನಂಬುವುದಕ್ಕೆ ಕಾರಣವಿದ್ದರೆ ಅಂಥ ಯಾವುದೇ ಕಟ್ಟಡವನ್ನು ಅಥವಾ ಸ್ಥಳವನ್ನು ಪ್ರವೇಶಿಸಬಹುದು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973ರ (1974ರ 2) 100ನೇ ಪ್ರಕರಣದ ಉಪಬಂಧಗಳಿಗೆ, ಅವು ಅನ್ವಯವಾಗಬಹುದಾದಷ್ಟರ ಮಟ್ಟಿಗೆ ಒಳಪಟ್ಟು ಅಂಥ ಯಾವುದೇ ದಸ್ತಾವೇಜನ್ನು ವಶಪಡಿಸಿಕೊಳ್ಳಬಹುದು ಅಥವಾ ಅವುಗಳಿಂದ ಉದ್ಧೃತ ಭಾಗಗಳನ್ನು ಅಥವಾ ಪ್ರತಿಗಳನ್ನು ತೆಗೆದುಕೊಳ್ಳಬಹುದು.

(4) ಆಯೋಗವನ್ನು ಸಿವಿಲ್ ನ್ಯಾಯಾಲಯವೆಂಬುದಾಗಿ ಭಾವಿಸತಕ್ಕದ್ದು ಮತ್ತು ಆಯೋಗದ ಅಭಿಪ್ರಾಯದ ಪ್ರಕಾರ ಅಥವಾ ಅದರ ಸಮ್ಮುಖದಲ್ಲಿ ಭಾರತ ದಂಡ ಸಂಹಿತೆಯ (1860ರ 45) 175ನೇ ಪ್ರಕರಣ, 178ನೇ ಪ್ರಕರಣ, 179ನೇ ಪ್ರಕರಣ, 180ನೇ ಪ್ರಕರಣ ಅಥವಾ 228ನೇ ಪ್ರಕರಣದಲ್ಲಿ ವಿವರಿಸಲಾಗಿರುವ ಯಾವುದೇ ಅಪರಾಧವನ್ನು ಮಾಡಿದ್ದರೆ, ಆಯೋಗವು ಅಪರಾಧಕ್ಕೆ ಕಾರಣವಾದ ಸಂಗತಿಗಳನ್ನು ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973 (1974ರ 2) ರಲ್ಲಿ ಉಪಬಂಧಿಸಿದಂತೆ ಆಪಾದಿತನ ಹೇಳಿಕೆಯನ್ನು ದಾಖಲು ಮಾಡಿಕೊಂಡ ತರುವಾಯ ಮೊಕದ್ದಮೆಯನ್ನು ವಿಚಾರಣೆ ಮಾಡಲು ಅಧಿಕಾರವ್ಯಾಪ್ತಿ ಹೊಂದಿರುವ ಮ್ಯಾಜಿಸ್ಟ್ರೇಟನಿಗೆ ಕಳುಹಿಸತಕ್ಕದ್ದು ಮತ್ತು ಅಂಥ ಯಾವುದೇ ಮೊಕದ್ದಮೆಯನ್ನು ಯಾವ ಮ್ಯಾಜಿಸ್ಟ್ರೇಟನಿಗೆ ಕಳುಹಿಸಲಾಗಿದೆಯೋ ಆ ಮ್ಯಾಜಿಸ್ಟ್ರೇಟನು ದಂಡ ಪ್ರಕ್ರಿಯಾ ಸಂಹಿತೆ, 1973ರ 346ನೇ ಪ್ರಕರಣದ ಮೇರೆಗೆ ತನಗೆ ಮೊಕದ್ದಮೆಯನ್ನು ಕಳುಹಿಸಲಾಗಿದ್ದರೆ ಹೇಗೋ ಹಾಗೆ ಆಪಾದಿತನ ವಿರುದ್ಧ ಇರುವ ದೂರಿನ ಸುನಾವಣೆ ಮಾಡಲು ಮುಂದುವರಿಯತಕ್ಕದ್ದು.

(5) ಆಯೋಗದ ಮುಂದಿರುವ ಪ್ರತಿಯೊಂದು ವ್ಯವಹರಣೆಯನ್ನು 193 ಮತ್ತು 228ನೇ ಪ್ರಕರಣಗಳ ಅರ್ಥವ್ಯಾಪ್ತಿಯಲ್ಲಿ ಮತ್ತು ಭಾರತ ದಂಡ ಸಂಹಿತೆಯ (1860ರ 45) 196ನೇ ಪ್ರಕರಣದ ಉದ್ದೇಶಗಳಿಗಾಗಿ ನ್ಯಾಯಿಕ ವ್ಯವಹರಣೆಯೆಂದು ಭಾವಿಸತಕ್ಕದ್ದು ಮತ್ತು 1973ರ ದಂಡ ಪ್ರಕ್ರಿಯಾ ಸಂಹಿತೆಯ (1974ರ 2) 195ನೇ ಪ್ರಕರಣದ ಮತ್ತು XXVIನೇ ಅಧ್ಯಾಯದ ಎಲ್ಲಾ ಉದ್ದೇಶಗಳಿಗಾಗಿ ಆಯೋಗವನ್ನು ಸಿವಿಲ್ ನ್ಯಾಯಾಲಯವೆಂದು ಭಾವಿಸತಕ್ಕದ್ದು.

14. ತನಿಖೆ:- (1) ಆಯೋಗವು, ವಿಚಾರಣೆಗೆ ಸಂಬಂಧಿಸಿದ ಯಾವುದೇ ತನಿಖೆಯನ್ನು ನಡೆಸುವ ಉದ್ದೇಶಕ್ಕಾಗಿ, ಸಂದರ್ಭಾನುಸಾರ, ಕೇಂದ್ರ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಸಹಮತಿಯೊಡನೆ ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರದ ಯಾರೇ ಅಧಿಕಾರಿಯ ಅಥವಾ ತನಿಖಾ ಏಜೆನ್ಸಿಯ ಸೇವೆಗಳನ್ನು ಉಪಯೋಗಿಸಿಕೊಳ್ಳಬಹುದು.

(2) ವಿಚಾರಣೆಗೆ ಸಂಬಂಧಿಸಿದ ಯಾವುದೇ ವಿಷಯದ ತನಿಖೆ ನಡೆಸುವ ಉದ್ದೇಶಕ್ಕಾಗಿ (1)ನೇ ಉಪ-ಪ್ರಕರಣದ ಮೇರೆಗೆ ಯಾವ ಅಧಿಕಾರಿ ಅಥವಾ ಏಜೆನ್ಸಿಯ ಸೇವೆಗಳನ್ನು ಉಪಯೋಗಿಸಿಕೊಳ್ಳಲಾಗಿದೆಯೋ ಆ ಅಧಿಕಾರಿ ಅಥವಾ ಏಜೆನ್ಸಿಯು ಆಯೋಗದ ನಿರ್ದೇಶನ ಮತ್ತು ನಿಯಂತ್ರಣಕ್ಕೆ ಒಳಪಟ್ಟು,-

(ಎ) ಯಾರೇ ವ್ಯಕ್ತಿಯನ್ನು ಸಮನು ಮಾಡಬಹುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸಬಹುದು ಮತ್ತು ಪ್ರಮಾಣ ಮಾಡಿಸಿ ಅವನನ್ನು ಪರೀಕ್ಷಿಸಬಹುದು;

(ಬಿ) ಯಾವುದೇ ದಸ್ತಾವೇಜನ್ನು ಶೋಧಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸಬಹುದು; ಮತ್ತು

(ಸಿ) ಯಾವುದೇ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆ ಅಥವಾ ಅದರ ಪ್ರತಿಯನ್ನು ಕಡ್ಡಾಯವಾಗಿ ಕೋರಬಹುದು.

(3) 15ನೇ ಪ್ರಕರಣದ ಉಪಬಂಧಗಳು, ಆಯೋಗದ ಮುಂದೆ ಒಬ್ಬ ವ್ಯಕ್ತಿಯು ಸಾಕ್ಷ್ಯವನ್ನು ಕೊಡುವ ಸಮಯದಲ್ಲಿ ನೀಡಿದ ಯಾವುದೇ ಹೇಳಿಕೆಯ ಸಂಬಂಧದಲ್ಲಿ ಅನ್ವಯವಾಗುವಂತೆಯೇ (1)ನೇ ಉಪ-ಪ್ರಕರಣದ ಮೇರೆಗೆ ಯಾವ ಅಧಿಕಾರಿ ಅಥವಾ ಏಜೆನ್ಸಿಯ ಸೇವೆಗಳನ್ನು ಉಪಯೋಗಿಸಿಕೊಳ್ಳಲಾಗಿದೆಯೋ ಆ ಅಧಿಕಾರಿ ಅಥವಾ ಏಜೆನ್ಸಿಯ ಮುಂದೆ ನೀಡಿದ ಯಾವುದೇ ಹೇಳಿಕೆಯ ಸಂಬಂಧದಲ್ಲೂ ಸಹ ಅನ್ವಯವಾಗತಕ್ಕದ್ದು.

(4) (1)ನೇ ಉಪ-ಪ್ರಕರಣದ ಮೇರೆಗೆ ಯಾವ ಅಧಿಕಾರಿ ಅಥವಾ ಏಜೆನ್ಸಿಯು ಸೇವೆಗಳನ್ನು ಉಪಯೋಗಿಸಿಕೊಳ್ಳಲಾಗಿದೆಯೋ ಆ ಅಧಿಕಾರಿಯು ಅಥವಾ ಏಜೆನ್ಸಿಯು, ವಿಚಾರಣೆಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ತನಿಖೆ ನಡೆಸತಕ್ಕದ್ದು ಮತ್ತು ಅದರ ಮೇಲೆ ಆಯೋಗವು ಈ ಬಗ್ಗೆ ನಿರ್ದಿಷ್ಟಪಡಿಸಬಹುದಾದಂಥ ಅವಧಿಯೊಳಗಾಗಿ ಆಯೋಗಕ್ಕೆ ಆ ಬಗ್ಗೆ ವರದಿಯನ್ನು ಸಲ್ಲಿಸತಕ್ಕದ್ದು.

(5) ಆಯೋಗವು, (4)ನೇ ಉಪ-ಪ್ರಕರಣದ ಮೇರೆಗೆ ತನಗೆ ಒಪ್ಪಿಸಲಾದ ವರದಿಯಲ್ಲಿ ಹೇಳಲಾದ ಸಂಗತಿಗಳು ಮತ್ತು ಕೈಗೊಂಡ ನಿರ್ಣಯಗಳು ಯಾವುವಾದರೂ ಇದ್ದರೆ, ಅವುಗಳ ಸರಿತನದ ಬಗ್ಗೆ ಮನವರಿಕೆ ಮಾಡಿಕೊಳ್ಳತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಆಯೋಗವು ತಾನು ಸೂಕ್ತವೆಂದು ಭಾವಿಸುವಂಥ ವಿಚಾರಣೆಯನ್ನು (ತನಿಖೆ ನಡೆಸಿದ ಮತ್ತು ತನಿಖೆಯಲ್ಲಿ ಸಹಾಯಮಾಡಿದ ವ್ಯಕ್ತಿ ಅಥವಾ ವ್ಯಕ್ತಿಗಳ ಪರೀಕ್ಷೆಯೂ ಸೇರಿದಂತೆ) ಮಾಡಬಹುದು.

15. ವ್ಯಕ್ತಿಗಳು ಆಯೋಗಕ್ಕೆ ನೀಡಿದ ಹೇಳಿಕೆ:- ಆಯೋಗದ ಮುಂದೆ ಸಾಕ್ಷ್ಯವನ್ನು ಕೊಡುವ ಸಂದರ್ಭದಲ್ಲಿ ವ್ಯಕ್ತಿಯು ನೀಡಿದ ಯಾವುದೇ ಹೇಳಿಕೆಯನ್ನು, ಅಂಥ ಹೇಳಿಕೆಯ ಮೂಲಕ ಸುಳ್ಳು ಸಾಕ್ಷ್ಯವನ್ನು ಕೊಟ್ಟಿದ್ದಕ್ಕಾಗಿ ಪ್ರಾಸಿಕ್ಯೂಷನ್‌ಗೆ ಒಳಪಡಿಸುವುದರ, ಹೊರತು ಅವನನ್ನು ಯಾವುದೇ ಸಿವಿಲ್ ಅಥವಾ ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸತಕ್ಕದ್ದಲ್ಲ ಅಥವಾ ಆ ಹೇಳಿಕೆಯನ್ನು ಅವನ ವಿರುದ್ಧ ಬಳಸಿಕೊಳ್ಳತಕ್ಕದ್ದಲ್ಲ:

ಪರಂತು, ಆ ಹೇಳಿಕೆಯು,-

(ಎ) ಅವನು ಉತ್ತರಿಸಬೇಕೆಂದು ಆಯೋಗವು ಅಗತ್ಯಪಡಿಸಿರುವ ಪ್ರಶ್ನೆಗೆ ಕೊಟ್ಟ ಉತ್ತರವಾಗಿರಬೇಕು; ಅಥವಾ

(ಬಿ) ವಿಚಾರಣಾ ವಸ್ತು ವಿಷಯಕ್ಕೆ ಸುಸಂಬದ್ಧವಾಗಿರಬೇಕು.

16. ಪ್ರತಿಕೂಲ ಪರಿಣಾಮಕ್ಕೊಳಗಾಗುವ ಸಂಭವವಿರುವ ವ್ಯಕ್ತಿಗಳ ಅಹವಾಲು ಕೇಳುವುದು:- ವಿಚಾರಣೆಯ ಯಾವುದೇ ಹಂತದಲ್ಲಿ ಆಯೋಗವು,-

(ಎ) ಯಾರೇ ವ್ಯಕ್ತಿಯ ನಡತೆಯ ಬಗ್ಗೆ ವಿಚಾರಣೆ ನಡೆಸುವುದು ಅವಶ್ಯವೆಂದು ಪರಿಗಣಿಸಿದರೆ; ಅಥವಾ

(ಬಿ) ವಿಚಾರಣೆಯಿಂದಾಗಿ ಯಾರೇ ವ್ಯಕ್ತಿಯ ಖ್ಯಾತಿಗೆ ಪ್ರತಿಕೂಲ ಪರಿಣಾಮ ಉಂಟಾಗುವ ಸಂಭವವಿದೆಯೆಂದು ಅಭಿಪ್ರಾಯಪಟ್ಟರೆ

- ಆ ವ್ಯಕ್ತಿಗೆ ವಿಚಾರಣೆಯಲ್ಲಿ ತನ್ನ ಅಹವಾಲನ್ನು ಹೇಳಿಕೊಳ್ಳಲು ಮತ್ತು ತನ್ನ ಪ್ರತಿರಕ್ಷೆಗೆ ಸಾಕ್ಷ್ಯವನ್ನು ಹಾಜರುಪಡಿಸಲು ಒಂದು ಯುಕ್ತ ಅವಕಾಶವನ್ನು ಕೊಡತಕ್ಕದ್ದು:

ಪರಂತು, ಸಾಕ್ಷಿಯ ವಿಶ್ವಾಸಾರ್ಹತೆಯನ್ನು ಪ್ರಶ್ನಿಸಿರುವಲ್ಲಿ ಈ ಪ್ರಕರಣದಲ್ಲಿರುವ ಯಾವುದೂ ಅನ್ವಯವಾಗತಕ್ಕದ್ದಲ್ಲ.

## ಅಧ್ಯಾಯ - IV

### ಕಾರ್ಯವಿಧಾನ

17. ದೂರುಗಳ ವಿಚಾರಣೆ:- ಮಾನವ ಹಕ್ಕುಗಳ ಉಲ್ಲಂಘನೆಯ ದೂರುಗಳ ಬಗ್ಗೆ ವಿಚಾರಣೆ ನಡೆಸುವಾಗ ಆಯೋಗವು,-

(i) ಕೇಂದ್ರ ಸರ್ಕಾರದಿಂದ ಅಥವಾ ಯಾವುದೇ ರಾಜ್ಯ ಸರ್ಕಾರದ ಅಥವಾ ಅದಕ್ಕೆ ಅಧೀನವಾಗಿರುವ ಇತರ ಪ್ರಾಧಿಕಾರದಿಂದ ಅಥವಾ ಸಂಸ್ಥೆಯಿಂದ ತಾನು ನಿರ್ದಿಷ್ಟಪಡಿಸಬಹುದಾದಂಥ ಸಮಯದೊಳಗಾಗಿ ಮಾಹಿತಿಯನ್ನು ಅಥವಾ ವರದಿಯನ್ನು ತರಿಸಿಕೊಳ್ಳಬಹುದು:

ಪರಂತು,-

(ಎ) ಆಯೋಗವು ಗೊತ್ತುಪಡಿಸಿದ ಸಮಯದೊಳಗಾಗಿ ಮಾಹಿತಿ ಅಥವಾ ವರದಿಯು ಬಾರದೇ ಇದ್ದಲ್ಲಿ ತಾನೇ ಸ್ವತಃ ದೂರಿನ ವಿಚಾರಣೆ ನಡೆಸಲು ಮುಂದುವರಿಯಬಹುದು;

(ಬಿ) ಮಾಹಿತಿಯನ್ನು ಅಥವಾ ವರದಿಯನ್ನು ಸ್ವೀಕರಿಸಿದ ಮೇಲೆ, ಯಾವುದೇ ಹೆಚ್ಚಿನ ವಿಚಾರಣೆ ನಡೆಸುವುದು ಅಗತ್ಯವಿಲ್ಲವೆಂದು ಅಥವಾ ಸಂಬಂಧಪಟ್ಟ ಸರ್ಕಾರ ಅಥವಾ ಪ್ರಾಧಿಕಾರವು ಅಗತ್ಯವಿರುವ ಕ್ರಮವನ್ನು ಪ್ರಾರಂಭಿಸಿದೆಯೆಂದು ಅಥವಾ ಕೈಗೊಂಡಿದೆಯೆಂದು ಆಯೋಗಕ್ಕೆ ಮನದಟ್ಟಾದರೆ, ಅದು ದೂರಿನ ವಿಚಾರಣೆ ಮಾಡದೇ ಇರಬಹುದು ಮತ್ತು ತದನುಸಾರವಾಗಿ ಅದನ್ನು ಫಿರ್ಯಾದಿಗೆ ತಿಳಿಸಬಹುದು;

(ii) (i)ನೇ ಖಂಡದಲ್ಲಿ ಒಳಗೊಂಡಿರುವ ಯಾವುದೇ ವಿಷಯಕ್ಕೆ ಬಾಧಕವಾಗದಂತೆ, ದೂರಿನ ಸ್ವರೂಪವನ್ನು ಗಮನಿಸಿ, ತಾನು ಅವಶ್ಯವೆಂದು ಭಾವಿಸಿದರೆ, ವಿಚಾರಣೆಯನ್ನು ಪ್ರಾರಂಭಿಸಬಹುದು.

18. ವಿಚಾರಣೆಯ ತರುವಾಯದ ಕ್ರಮಗಳು:- ಆಯೋಗವು ಈ ಅಧಿನಿಯಮದ ಮೇರೆಗೆ ವಿಚಾರಣೆಯನ್ನು ಪೂರ್ಣಗೊಳಿಸಿದ ನಂತರ ಈ ಕೆಳಕಂಡ ಕ್ರಮಗಳಲ್ಲಿ ಯಾವುದೇ ಕ್ರಮವನ್ನು ಕೈಗೊಳ್ಳಬಹುದು, ಎಂದರೆ:-

(1) ಲೋಕ ನೌಕರನು ಮಾನವ ಹಕ್ಕುಗಳನ್ನು ಉಲ್ಲಂಘಿಸಿದ್ದಾನೆಂದು ಅಥವಾ ಮಾನವ ಹಕ್ಕುಗಳ ಉಲ್ಲಂಘನೆಯನ್ನು ತಡೆಯುವಲ್ಲಿ ನಿರ್ಲಕ್ಷ್ಯ ತೋರಿದ್ದಾನೆಂದು ವಿಚಾರಣೆಯಿಂದ ಕಂಡುಬಂದರೆ, ಆಯೋಗವು ಸಂಬಂಧಪಟ್ಟ ವ್ಯಕ್ತಿ ಅಥವಾ ವ್ಯಕ್ತಿಗಳ ವಿರುದ್ಧ ಪ್ರಾಸಿಕ್ಯೂಷನ್ ವ್ಯವಹರಣೆಗಳನ್ನು ಅಥವಾ ತಾನು ಸೂಕ್ತವೆಂದು ಭಾವಿಸುವಂಥ ಇತರ ಕ್ರಮವನ್ನು ಪ್ರಾರಂಭಿಸುವಂತೆ ಸಂಬಂಧಪಟ್ಟ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಶಿಫಾರಸು ಮಾಡಬಹುದು;

(2) ಸರ್ವೋಚ್ಚ ನ್ಯಾಯಾಲಯವು ಅಥವಾ ಉಚ್ಚ ನ್ಯಾಯಾಲಯವು ಅವಶ್ಯವೆಂದು ಭಾವಿಸಬಹುದಾದಂಥ ನಿರ್ದೇಶನಗಳು, ಆದೇಶಗಳು ಅಥವಾ ರಿಟ್‌ಗಳಿಗಾಗಿ ಆ ನ್ಯಾಯಾಲಯವನ್ನು ಕೋರಬಹುದು;

(3) ಸಂಕಷ್ಟಕ್ಕೊಳಗಾದ ವ್ಯಕ್ತಿಗೆ ಅಥವಾ ಅವನ ಕುಟುಂಬದ ಸದಸ್ಯರಿಗೆ ಆಯೋಗವು ಅವಶ್ಯವೆಂದು ಪರಿಗಣಿಸಬಹುದಾದಂಥ ತತ್‌ಕ್ಷಣ ಒದಗುವ ಮಧ್ಯಕಾಲೀನ ಪರಿಹಾರವನ್ನು ಮಂಜೂರು ಮಾಡುವಂತೆ ಸಂಬಂಧಪಟ್ಟ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಶಿಫಾರಸು ಮಾಡುವುದು;

(4) (5)ನೇ ಖಂಡದ ಉಪಬಂಧಗಳಿಗೊಳಪಟ್ಟು ವಿಚಾರಣಾ ವರದಿಯ ಒಂದು ಪ್ರತಿಯನ್ನು ಅರ್ಜಿದಾರನಿಗೆ ಅಥವಾ ಅವನ ಪ್ರತಿನಿಧಿಗೆ ಒದಗಿಸುವುದು;

(5) ಆಯೋಗವು ತಾನು ನಡೆಸಿದ ವಿಚಾರಣಾ ವರದಿಯ ಒಂದು ಪ್ರತಿಯನ್ನು ತನ್ನ ಶಿಫಾರಸುಗಳ ಸಹಿತ ಸಂಬಂಧಪಟ್ಟ ಸರ್ಕಾರಕ್ಕೆ ಅಥವಾ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಸಂಬಂಧಪಟ್ಟ ಸರ್ಕಾರ ಅಥವಾ ಪ್ರಾಧಿಕಾರವು ಒಂದು ತಿಂಗಳ ಅವಧಿಯೊಳಗಾಗಿ ಅಥವಾ ಆಯೋಗವು ಅನುಮತಿಸಬಹುದಾದಂಥ ಇನ್ನೂ ಹೆಚ್ಚಿನ ಅವಧಿಯೊಳಗಾಗಿ ಆ ಬಗ್ಗೆ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವೂ ಸೇರಿದಂತೆ ವರದಿಯ ಮೇಲಿನ ತನ್ನ ಟೀಕೆ-ಟಿಪ್ಪಣಿಗಳನ್ನು ಆಯೋಗಕ್ಕೆ ಕಳುಹಿಸಿಕೊಡತಕ್ಕದ್ದು;

(6) ಆಯೋಗವು ಸಂಬಂಧಪಟ್ಟ ಸರ್ಕಾರದ ಅಥವಾ ಪ್ರಾಧಿಕಾರದ ಟೀಕೆ ಟಿಪ್ಪಣಿಗಳೇನಾದರೂ ಇದ್ದರೆ, ಅವುಗಳ ಮತ್ತು ಆಯೋಗದ ಶಿಫಾರಸುಗಳ ಮೇಲೆ ಸಂಬಂಧಪಟ್ಟ ಸರ್ಕಾರ ಅಥವಾ ಪ್ರಾಧಿಕಾರವು ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮ

- ಇವುಗಳೊಂದಿಗೆ ತಾನು ನಡೆಸಿದ ವಿಚಾರಣಾ ವರದಿಯನ್ನು ಪ್ರಕಟಿಸತಕ್ಕದ್ದು.

19. ಸಶಸ್ತ್ರ ಬಲಗಳ ಸಂಬಂಧದಲ್ಲಿ ಕಾರ್ಯವಿಧಾನ:- (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಸಶಸ್ತ್ರ ಬಲಗಳ ಸದಸ್ಯರಿಂದ ಮಾನವ ಹಕ್ಕುಗಳ ಉಲ್ಲಂಘನೆಯಾದ ದೂರುಗಳ ಬಗ್ಗೆ ವ್ಯವಹರಿಸುವಾಗ, ಆಯೋಗವು ಈ ಕೆಳಕಂಡ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು, ಎಂದರೆ:-

(ಎ) ಅದು ತಾನಾಗಿಯೇ ಆಗಲಿ ಅಥವಾ ಅರ್ಜಿಯನ್ನು ಸ್ವೀಕರಿಸಿದ ಮೇಲೆ ಆಗಲಿ ಕೇಂದ್ರ ಸರ್ಕಾರದಿಂದ ಒಂದು ವರದಿಯನ್ನು ಕೋರಬಹುದು;

(ಬಿ) ವರದಿಯನ್ನು ಸ್ವೀಕರಿಸಿದ ತರುವಾಯ ಅದು ದೂರಿನ ಬಗ್ಗೆ ಕ್ರಮ ಕೈಗೊಳ್ಳದಿರಬಹುದು ಅಥವಾ ಸಂದರ್ಭಾನುಸಾರ ಕೇಂದ್ರ ಸರ್ಕಾರಕ್ಕೆ ತನ್ನ ಶಿಫಾರಸುಗಳನ್ನು ಕಳುಹಿಸಬಹುದು.

(2) ಕೇಂದ್ರ ಸರ್ಕಾರವು, ಶಿಫಾರಸುಗಳ ಮೇಲೆ ತಾನು ಕೈಗೊಂಡ ಕ್ರಮದ ಬಗ್ಗೆ ಮೂರು ತಿಂಗಳೊಳಗಾಗಿ ಅಥವಾ ಆಯೋಗವು ಅನುಮತಿಸಬಹುದಾದ ಇನ್ನೂ ಹೆಚ್ಚಿನ ಅವಧಿಯೊಳಗಾಗಿ ಆಯೋಗಕ್ಕೆ ತಿಳಿಸತಕ್ಕದ್ದು.

(3) ಆಯೋಗವು, ಕೇಂದ್ರ ಸರ್ಕಾರಕ್ಕೆ ತಾನು ಕಳುಹಿಸಿದ ಶಿಫಾರಸುಗಳನ್ನು ಹಾಗೂ ಅಂಥ ಶಿಫಾರಸುಗಳ ಮೇಲೆ ಸರ್ಕಾರವು ಕೈಗೊಂಡ ಕ್ರಮ - ಇವುಗಳೊಂದಿಗೆ ತನ್ನ ವರದಿಯನ್ನು ಪ್ರಕಟಿಸತಕ್ಕದ್ದು.

(4) ಆಯೋಗವು, (3)ನೇ ಉಪ-ಪ್ರಕರಣದ ಮೇರೆಗೆ ಪ್ರಕಟಿಸಿದ ವರದಿಯ ಒಂದು ಪ್ರತಿಯನ್ನು ಅರ್ಜಿದಾರನಿಗೆ ಅಥವಾ ಅವನ ಪ್ರತಿನಿಧಿಗೆ ಒದಗಿಸತಕ್ಕದ್ದು.

20. ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು:- (1) ಆಯೋಗವು ಕೇಂದ್ರ ಸರ್ಕಾರಕ್ಕೆ ಮತ್ತು ಸಂಬಂಧಪಟ್ಟ ರಾಜ್ಯ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ವಾರ್ಷಿಕ ವರದಿಯನ್ನು ಸಲ್ಲಿಸುವವರೆಗೆ ಮುಂದೂಡಲಾಗದಂಥ, ಜರೂರಾದ ಮತ್ತು ಮಹತ್ವದ ವಿಷಯವೆಂದು ತಾನು ಅಭಿಪ್ರಾಯಪಡುವಂಥ ಯಾವುದೇ ವಿಷಯದ ಬಗ್ಗೆ ವಿಶೇಷ ವರದಿಗಳನ್ನು ಯಾವುದೇ ಸಮಯದಲ್ಲಾದರೂ ಸಲ್ಲಿಸಬಹುದು.

(2) ಕೇಂದ್ರ ಸರ್ಕಾರವು ಮತ್ತು ಸಂದರ್ಭಾನುಸಾರ ರಾಜ್ಯ ಸರ್ಕಾರವು ಆಯೋಗದ ಶಿಫಾರಸಿನ ಮೇಲೆ ಕೈಗೊಂಡಿರುವ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಮತ್ತು ಶಿಫಾರಸುಗಳನ್ನು ಅಂಗೀಕರಿಸದಿರುವುದಕ್ಕೆ ಕಾರಣಗಳೇನಾದರೂ ಇದ್ದರೆ ಆ ಕುರಿತು ಜ್ಞಾಪನ ಪತ್ರದೊಂದಿಗೆ ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳನ್ನು ಅನುಕ್ರಮವಾಗಿ ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅಥವಾ ಸಂದರ್ಭಾನುಸಾರ, ರಾಜ್ಯ ವಿಧಾನ ಮಂಡಲದ ಮುಂದೆ ಮಂಡಿಸುವಂತೆ ಮಾಡತಕ್ಕದ್ದು.

## ಅಧ್ಯಾಯ - V

## ರಾಜ್ಯ ಮಾನವ ಹಕ್ಕುಗಳ ಆಯೋಗಗಳು

21. ರಾಜ್ಯ ಮಾನವ ಹಕ್ಕುಗಳ ಆಯೋಗಗಳ ರಚನೆ:- (1) ರಾಜ್ಯ ಸರ್ಕಾರವು ಈ ಅಧ್ಯಾಯದ ಮೇರೆಗೆ ರಾಜ್ಯ ಆಯೋಗಕ್ಕೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಲು ಮತ್ತು ಅದಕ್ಕೆ ವಹಿಸಿಕೊಟ್ಟಿರುವ ಪ್ರಕಾರ್ಯಗಳನ್ನು ನಿರ್ವಹಿಸಲು ---------------(ರಾಜ್ಯದ ಹೆಸರು) ಮಾನವ ಹಕ್ಕುಗಳ ಆಯೋಗವೆಂಬುದಾಗಿ ಕರೆಯಲಾಗುವ ಒಂದು ನಿಕಾಯವನ್ನು ರಚಿಸಬಹುದು.

(2) ರಾಜ್ಯ ಆಯೋಗವು, ಈ ಕೆಳಕಂಡವರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯಾಗಿದ್ದ ಒಬ್ಬ ಅಧ್ಯಕ್ಷ;

(ಬಿ) ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ನ್ಯಾಯಾಧೀಶನಾಗಿದ್ದ ಒಬ್ಬ ಸದಸ್ಯ;

(ಸಿ) ಆ ರಾಜ್ಯದಲ್ಲಿ ಜಿಲ್ಲಾ ನ್ಯಾಯಾಧೀಶನಾಗಿರುವ ಅಥವಾ ಜಿಲ್ಲಾ ನ್ಯಾಯಾಧೀಶನಾಗಿದ್ದ ಒಬ್ಬ ಸದಸ್ಯ;

(ಡಿ) ಮಾನವ ಹಕ್ಕುಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ತಿಳಿವಳಿಕೆಯುಳ್ಳ ಅಥವಾ ವ್ಯಾವಹಾರಿಕ ಅನುಭವ ಹೊಂದಿರುವ ವ್ಯಕ್ತಿಗಳ ಪೈಕಿಯಿಂದ ನೇಮಕ ಮಾಡಿಕೊಳ್ಳಬೇಕಾಗಿರುವ ಇಬ್ಬರು ಸದಸ್ಯರು.

(3) ರಾಜ್ಯ ಆಯೋಗದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಒಬ್ಬ ಕಾರ್ಯದರ್ಶಿ ಇರತಕ್ಕದ್ದು ಮತ್ತು ಅವನು ರಾಜ್ಯ ಆಯೋಗವು ತನಗೆ ಪ್ರತ್ಯಾಯೋಜಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(4) ರಾಜ್ಯ ಆಯೋಗದ ಕೇಂದ್ರ ಕಾರ್ಯಸ್ಥಾನವು ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಸ್ಥಳದಲ್ಲಿರತಕ್ಕದ್ದು.

(5) ರಾಜ್ಯ ಆಯೋಗವು ಸಂವಿಧಾನದ ಏಳನೇ ಅನುಸೂಚಿಯಲ್ಲಿನ IIನೇ ಪಟ್ಟಿ ಮತ್ತು IIIನೇ ಪಟ್ಟಿಯಲ್ಲಿನ ಯಾವುದೇ ನಮೂದಿಗೆ ಸಂಬಂಧಪಡುವ ಯಾವುದೇ ವಿಷಯಗಳ ಸಂಬಂಧದಲ್ಲಿ ಮಾತ್ರ ಆಗಿರುವ ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ವಿಚಾರಣೆ ನಡೆಸಬಹುದು:

ಪರಂತು, ಅಂಥ ಯಾವುದೇ ವಿಷಯವನ್ನು ಆಯೋಗವು ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಕ್ರಮಬದ್ಧವಾಗಿ ರಚಿಸಲಾದ ಯಾವುದೇ ಇತರ ಆಯೋಗವು ಈಗಾಗಲೇ ವಿಚಾರಣೆ ನಡೆಸುತ್ತಿದ್ದರೆ, ರಾಜ್ಯ ಆಯೋಗವು ಅಂಥ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದ್ದಲ್ಲ:

ಮತ್ತೂ ಪರಂತು, ಜಮ್ಮು ಮತ್ತು ಕಾಶ್ಮೀರ ಮಾನವ ಹಕ್ಕುಗಳ ಆಯೋಗಕ್ಕೆ ಸಂಬಂಧಿಸಿದಂತೆ, " ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ IIನೇ ಪಟ್ಟಿ ಅಥವಾ IIIನೇ ಪಟ್ಟಿಯಲ್ಲಿ " ಎಂಬ ಪದಗಳು ಮತ್ತು ಅಂಕಿಗಳ ಬದಲಾಗಿ, " ಜಮ್ಮು ಮತ್ತು ಕಾಶ್ಮೀರ ರಾಜ್ಯಕ್ಕೆ ಅನ್ವಯಿಸುವಂತೆ ಸಂವಿಧಾನದ ಏಳನೇ ಅನುಸೂಚಿಯಲ್ಲಿರುವ IIIನೇ ಪಟ್ಟಿಯಲ್ಲಿ ಮತ್ತು ಆ ರಾಜ್ಯದ ವಿಧಾನ ಮಂಡಲವು ಕಾನೂನುಗಳನ್ನು ರಚಿಸಲು ಅಧಿಕಾರ ಹೊಂದಿರುವಂತಹ ವಿಷಯಗಳ ಸಂಬಂಧದಲ್ಲಿ " ಎಂಬ ಪದಗಳು ಮತ್ತು ಅಂಕಿಗಳನ್ನು ಪ್ರತ್ಯಾಯೋಜಿಸಲಾಗಿದ್ದರೆ ಹೇಗೋ ಹಾಗೆ ಈ ಉಪ-ಪ್ರಕರಣವು ಪರಿಣಾಮ ಹೊಂದತಕ್ಕದ್ದು.

22. ರಾಜ್ಯ ಆಯೋಗದ ಅಧ್ಯಕ್ಷ ಮತ್ತು ಇತರ ಸದಸ್ಯರ ನೇಮಕಾತಿ:- (1) ಅಧ್ಯಕ್ಷ ಮತ್ತು ಇತರ ಸದಸ್ಯರನ್ನು ರಾಜ್ಯಪಾಲನು ತನ್ನ ಸಹಿ ಮತ್ತು ಮೊಹರು ಹಾಕಿದ ವಾರಂಟಿನ ಮೂಲಕ ನೇಮಿಸತಕ್ಕದ್ದು:

ಪರಂತು, ಈ ಉಪ-ಪ್ರಕರಣದ ಮೇರೆಗಿನ ಪ್ರತಿಯೊಂದು ನೇಮಕಾತಿಯನ್ನು ಈ ಕೆಳಕಂಡವರನ್ನೊಳಗೊಂಡ ಸಮಿತಿಯ ಶಿಫಾರಸನ್ನು ಪಡೆದುಕೊಂಡ ನಂತರ ಮಾಡತಕ್ಕದ್ದು:

| | | |
|---|---|---|
| (ಎ) ಮುಖ್ಯ ಮಂತ್ರಿ | - | ಅಧ್ಯಕ್ಷ ; |
| (ಬಿ) ವಿಧಾನ ಸಭಾಧ್ಯಕ್ಷ | - | ಸದಸ್ಯ ; |
| (ಸಿ) ಆ ರಾಜ್ಯದಲ್ಲಿನ ಗೃಹ ಇಲಾಖೆಯ ಪ್ರಭಾರದಲ್ಲಿರುವ ಸಚಿವ | - | ಸದಸ್ಯ ; |
| (ಡಿ) ವಿಧಾನ ಸಭೆಯ ವಿರೋಧ ಪಕ್ಷದ ನಾಯಕ | - | ಸದಸ್ಯ : |

ಮತ್ತೂ ಪರಂತು, ವಿಧಾನ ಪರಿಷತ್ತು ಇರುವಂತಹ ರಾಜ್ಯದಲ್ಲಿ ವಿಧಾನ ಪರಿಷತ್ತಿನ ಸಭಾಪತಿ ಮತ್ತು ಆ ಪರಿಷತ್ತಿನ ವಿರೋಧ ಪಕ್ಷದ ನಾಯಕ ಸಹ ಸಮಿತಿಯ ಸದಸ್ಯರಾಗಿರತಕ್ಕದ್ದು:

ಅದೂ ಅಲ್ಲದೆ, ಸಂಬಂಧಪಟ್ಟ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶನೊಂದಿಗೆ ಸಮಾಲೋಚಿಸಿದ ಹೊರತು ಉಚ್ಚ ನ್ಯಾಯಾಲಯದ ಹಾಲಿ ನ್ಯಾಯಾಧೀಶನನ್ನಾಗಲೀ ಅಥವಾ ಹಾಲಿ ಜಿಲ್ಲಾ ನ್ಯಾಯಾಧೀಶನನ್ನಾಗಲೀ ನೇಮಿಸತಕ್ಕದ್ದಲ್ಲ.

(2) ಸಮಿತಿಯಲ್ಲಿ ಯಾವುದೇ ಸ್ಥಾನವು ಖಾಲಿ ಇರುವ ಕಾರಣ ಮಾತ್ರದಿಂದ ರಾಜ್ಯ ಆಯೋಗದ ಅಧ್ಯಕ್ಷನ ಅಥವಾ ಸದಸ್ಯನ ನೇಮಕಾತಿಯು ಅಸಿಂಧುವಾಗತಕ್ಕದ್ದಲ್ಲ.

23. ರಾಜ್ಯ ಆಯೋಗದ ಸದಸ್ಯರನ್ನು ತೆಗೆದುಹಾಕುವುದು:- (1) (2)ನೇ ಉಪ ಪ್ರಕರಣದ ಉಪಬಂಧಗಳಿಗೊಳಪಟ್ಟು, ರಾಜ್ಯ ಆಯೋಗದ ಅಧ್ಯಕ್ಷನನ್ನು ಅಥವಾ ಯಾರೇ ಇತರ ಸದಸ್ಯನನ್ನು ದುರ್ವರ್ತನೆ ಅಥವಾ ಅಸಮರ್ಥತೆಯ ಸಂಬಂಧದಲ್ಲಿ ರಾಷ್ಟ್ರಪತಿಯು ಸರ್ವೋಚ್ಚ ನ್ಯಾಯಾಲಯಕ್ಕೆ ಉಲ್ಲೇಖ ಮಾಡಿದ ತರುವಾಯ ಸರ್ವೋಚ್ಚ ನ್ಯಾಯಾಲಯವು ಆ ಬಗ್ಗೆ ನಿಯಮಿಸಲಾದ ಕಾರ್ಯವಿಧಾನಕ್ಕನುಸಾರವಾಗಿ ವಿಚಾರಣೆ ನಡೆಸಿದ ನಂತರ ರುಜುವಾತಾದ ದುರ್ವರ್ತನೆಯ ಕಾರಣದ ಮೇಲೆ ಅಥವಾ ಅಸಮರ್ಥತೆ ಕಾರಣದ ಮೇಲೆ ಅಧ್ಯಕ್ಷನನ್ನು ಅಥವಾ ಸಂದರ್ಭಾನುಸಾರ, ಇತರ ಸದಸ್ಯರನ್ನು ಅವನ ಪದದಿಂದ ತೆಗೆದುಹಾಕತಕ್ಕುದೆಂದು ಮಾಡಿದ ವರದಿಯ ಮೇರೆಗೆ ರಾಷ್ಟ್ರಪತಿಯ ಆದೇಶದ ಮೂಲಕ ಮಾತ್ರ ಅವನನ್ನು ತೆಗೆದುಹಾಕತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಆ ಅಧ್ಯಕ್ಷನು ಅಥವಾ ಸಂದರ್ಭಾನುಸಾರ ಇತರ ಸದಸ್ಯನು,-

(ಎ) ದಿವಾಳಿಯೆಂದು ನ್ಯಾಯನಿರ್ಣೀತನಾಗಿದ್ದರೆ; ಅಥವಾ

(ಬಿ) ತನ್ನ ಪದಾವಧಿಯಲ್ಲಿ ತನ್ನ ಪದದ ಕರ್ತವ್ಯಗಳ ಹೊರತು, ವೇತನ ಪಡೆಯುವಂಥ ಯಾವುದೇ ಉದ್ಯೋಗದಲ್ಲಿ ತೊಡಗಿದ್ದರೆ;

(ಸಿ) ಮಾನಸಿಕ ಅಥವಾ ದೈಹಿಕ ಅಸ್ವಸ್ಥತೆಯ ಕಾರಣದಿಂದ ಪದದಲ್ಲಿ ಮುಂದುವರೆಯಲು ಅನರ್ಹನಾಗಿದ್ದರೆ; ಅಥವಾ

(ಡಿ) ಅಸ್ವಸ್ಥ ಚಿತ್ತನಾಗಿದ್ದರೆ, ಮತ್ತು ಹಾಗೆಂದು ಸಕ್ಷಮ ನ್ಯಾಯಾಲಯದಿಂದ ಘೋಷಿತನಾಗಿದ್ದರೆ; ಅಥವಾ

(ಇ) ರಾಷ್ಟ್ರಪತಿಯ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನೊಳಗೊಂಡ ಅಪರಾಧಕ್ಕಾಗಿ ಅಪರಾಧಿಯೆಂದು ನಿರ್ಣೀತನಾಗಿದ್ದು ಕಾರಾವಾಸದ ಶಿಕ್ಷೆಗೆ ಗುರಿಯಾಗಿದ್ದರೆ

- ರಾಷ್ಟ್ರಪತಿಯು ಆದೇಶದ ಮೂಲಕ ಅಂಥ ಅಧ್ಯಕ್ಷನನ್ನು ಅಥವಾ ಯಾರೇ ಇತರ ಸದಸ್ಯನನ್ನು ಪದದಿಂದ ತೆಗೆದುಹಾಕಬಹುದು.

24. ರಾಜ್ಯ ಆಯೋಗದ ಸದಸ್ಯರ ಪದಾವಧಿ:- (1) ಅಧ್ಯಕ್ಷನಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ತನ್ನ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಅಥವಾ ಅವನಿಗೆ ಎಪ್ಪತ್ತು ವರ್ಷ ವಯಸ್ಸಾಗುವವರೆಗೆ - ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಆ ಪದದಲ್ಲಿರತಕ್ಕದ್ದು.

(2) ಸದಸ್ಯನಾಗಿ ನೇಮಕಗೊಂಡ ಒಬ್ಬ ವ್ಯಕ್ತಿಯು ತನ್ನ ಪದವನ್ನು ಧಾರಣ ಮಾಡಿದ ದಿನಾಂಕದಿಂದ ಐದು ವರ್ಷಗಳ ಅವಧಿಯವರೆಗೆ ಆ ಪದದಲ್ಲಿರತಕ್ಕದ್ದು ಮತ್ತು ನಂತರದ ಐದು ವರ್ಷಗಳ ಮತ್ತೊಂದು ಅವಧಿಗೆ ಪುನರ್ ನೇಮಕ ಹೊಂದಲು ಅರ್ಹನಾಗಿರತಕ್ಕದ್ದು:

ಪರಂತು, ಯಾರೇ ಸದಸ್ಯನು ಎಪ್ಪತ್ತು ವರ್ಷ ವಯಸ್ಸಾದ ನಂತರ ಆ ಪದವನ್ನು ಧಾರಣ ಮಾಡತಕ್ಕದಲ್ಲ.

(3) ಅಧ್ಯಕ್ಷನಾಗಲಿ ಅಥವಾ ಸದಸ್ಯನಾಗಲಿ ಪದವನ್ನು ಧಾರಣ ಮಾಡುವುದು ನಿಂತುಹೋದ ತರುವಾಯ ರಾಜ್ಯ ಸರ್ಕಾರದ ಅಥವಾ ಭಾರತ ಸರ್ಕಾರದ ಅಡಿಯಲ್ಲಿ ಯಾವುದೇ ಉದ್ಯೋಗಕ್ಕೆ ಅರ್ಹನಾಗಿರತಕ್ಕುದಲ್ಲ.

25. ಕೆಲವು ಸಂದರ್ಭಗಳಲ್ಲಿ ಸದಸ್ಯನು ಸಭಾಧ್ಯಕ್ಷನಾಗಿ ಕಾರ್ಯನಿರ್ವಹಿಸುವುದು ಅಥವಾ ಅಧ್ಯಕ್ಷನ ಪ್ರಕಾರ್ಯಗಳನ್ನು ನಿರ್ವಹಿಸುವುದು:- (1) ಅಧ್ಯಕ್ಷನ ಮರಣ, ರಾಜೀನಾಮೆ ಅಥವಾ ಅನ್ಯ ಕಾರಣದಿಂದ, ಅವನ ಪದವು ಖಾಲಿಯಾಗಿರುವ ಸಂದರ್ಭದಲ್ಲಿ ರಾಜ್ಯಪಾಲನು ಅಧಿಸೂಚನೆಯ ಮೂಲಕ ಅಂಥ ಖಾಲಿ ಸ್ಥಾನವನ್ನು ತುಂಬುವುದಕ್ಕಾಗಿ ಹೊಸ ಅಧ್ಯಕ್ಷನನ್ನು ನೇಮಕ ಮಾಡುವವರೆಗೆ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಲು ಸದಸ್ಯರ ಪೈಕಿ ಒಬ್ಬನನ್ನು ಅಧಿಕೃತಗೊಳಿಸಬಹುದು.

(2) ಅಧ್ಯಕ್ಷನು ರಜೆಯ ಕಾರಣದಿಂದ ಅಥವಾ ಅನ್ಯಥಾ ಗೈರುಹಾಜರಾಗಿದ್ದು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಸಾಧ್ಯವಾಗದಿರುವಾಗ ರಾಜ್ಯಪಾಲನು ಅಧಿಸೂಚನೆಯ ಮೂಲಕ, ಈ ಸಂಬಂಧದಲ್ಲಿ ಅಧಿಕೃತಗೊಳಿಸಲಾದ ಸದಸ್ಯರ ಪೈಕಿ ಒಬ್ಬನು, ಅಧ್ಯಕ್ಷನು ತನ್ನ ಕರ್ತವ್ಯಗಳಿಗೆ ಪುನಃ ಹಾಜರಾಗುವ ದಿನಾಂಕದವರೆಗೆ ಅಧ್ಯಕ್ಷರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

26. ರಾಜ್ಯ ಆಯೋಗದ ಸದಸ್ಯರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು:- ಸದಸ್ಯರಿಗೆ ಸಂದಾಯ ಮಾಡಬೇಕಾದ ಸಂಬಳಗಳು ಮತ್ತು ಭತ್ಯೆಗಳು ಮತ್ತು ಅವರ ಇತರ ಸೇವಾ ನಿಬಂಧನೆಗಳು ಹಾಗೂ ಷರತ್ತುಗಳು, ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಸದಸ್ಯನ ಸಂಬಳ ಮತ್ತು ಭತ್ಯೆಗಳನ್ನಾಗಲೀ ಅಥವಾ ಅವನ ಇತರ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನಾಗಲೀ ಅವನ ನೇಮಕಾತಿಯ ನಂತರ ಅವನಿಗೆ ಅನಾನುಕೂಲವಾಗುವ ಹಾಗೆ ವ್ಯತ್ಯಸ್ತಗೊಳಿಸತಕ್ಕುದಲ್ಲ.

27. ರಾಜ್ಯ ಆಯೋಗದ ಅಧಿಕಾರಿಗಳು ಮತ್ತು ಇತರ ಸಿಬ್ಬಂದಿ:- (1) ರಾಜ್ಯ ಸರ್ಕಾರವು ಆಯೋಗಕ್ಕೆ ಈ ಕೆಳಕಂಡವರನ್ನು ಒದಗಿಸತಕ್ಕದ್ದು, ಎಂದರೆ:-

(ಎ) ರಾಜ್ಯ ಸರ್ಕಾರದ ಕಾರ್ಯದರ್ಶಿ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿ ಅವನು ಆಯೋಗದ ಕಾರ್ಯದರ್ಶಿಯಾಗಿರತಕ್ಕದ್ದು; ಮತ್ತು

(ಬಿ) ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್ ಅವರ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಒಬ್ಬ ಅಧಿಕಾರಿಯ ಅಧೀನದಲ್ಲಿರುವ ಪೊಲೀಸು ಮತ್ತು ತನಿಖಾ ಸಿಬ್ಬಂದಿ ಹಾಗೂ ರಾಜ್ಯ ಆಯೋಗದ ಪ್ರಕಾರ್ಯಗಳನ್ನು ದಕ್ಷ ರೀತಿಯಲ್ಲಿ ನಿರ್ವಹಿಸಲು ಅವಶ್ಯವಿರಬಹುದಾದಂಥ ಇತರ ಅಧಿಕಾರಿಗಳು ಮತ್ತು ಸಿಬ್ಬಂದಿ.

(2) ರಾಜ್ಯ ಸರ್ಕಾರವು ಈ ಕುರಿತು ರಚಿಸಬಹುದಾದಂಥ ನಿಯಮಗಳಿಗೊಳಪಟ್ಟು ರಾಜ್ಯ ಆಯೋಗವು ತಾನು ಅವಶ್ಯವೆಂದು ಭಾವಿಸಬಹುದಾದಂಥ ಇತರ ಆಡಳಿತಾತ್ಮಕ, ತಾಂತ್ರಿಕ ಮತ್ತು ವೈಜ್ಞಾನಿಕ ಸಿಬ್ಬಂದಿಯನ್ನು ನೇಮಿಸಿಕೊಳ್ಳಬಹುದು.

(3) (2)ನೇ ಉಪ ಪ್ರಕರಣದ ಮೇರೆಗೆ ನೇಮಿಸಲಾದ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿವರ್ಗದ ಸಂಬಳಗಳು, ಭತ್ಯೆಗಳು ಮತ್ತು ಸೇವಾ ಷರತ್ತುಗಳು ರಾಜ್ಯ ಸರ್ಕಾರವು ನಿಯಮಿಸಬಹುದಾದಂತೆ ಇರತಕ್ಕದ್ದು.

28. ರಾಜ್ಯ ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳು:- (1) ರಾಜ್ಯ ಆಯೋಗವು ರಾಜ್ಯ ಸರ್ಕಾರಕ್ಕೆ ವಾರ್ಷಿಕ ವರದಿಯನ್ನು ಸಲ್ಲಿಸತಕ್ಕದ್ದು ಮತ್ತು ವಾರ್ಷಿಕ ವರದಿಯನ್ನು ಸಲ್ಲಿಸುವವರೆಗೆ ಮುಂದೂಡಲಾಗದಂಥ ಜರೂರಾದ ಮತ್ತು ಮಹತ್ವದ ವಿಷಯವೆಂದು ತಾನು ಅಭಿಪ್ರಾಯಪಡುವಂಥ ಯಾವುದೇ ವಿಷಯದ ಬಗ್ಗೆ ವಿಶೇಷ ವರದಿಗಳನ್ನು ಯಾವುದೇ ಸಮಯದಲ್ಲಾದರೂ ಸಲ್ಲಿಸಬಹುದು.

(2) ರಾಜ್ಯ ಸರ್ಕಾರವು ರಾಜ್ಯ ಆಯೋಗದ ವಾರ್ಷಿಕ ಮತ್ತು ವಿಶೇಷ ವರದಿಗಳನ್ನು, ರಾಜ್ಯ ವಿಧಾನ ಮಂಡಲವು ಉಭಯ ಸದನಗಳನ್ನು ಒಳಗೊಂಡಿರುವಲ್ಲಿ ಅದರ ಪ್ರತಿಯೊಂದು ಸದನದ ಮುಂದೆ, ಅಥವಾ ವಿಧಾನ ಮಂಡಲವು ಒಂದೇ ಸದನವನ್ನು ಒಳಗೊಂಡಿರುವಲ್ಲಿ, ಅಂಥ ಸದನದ ಮುಂದೆ ರಾಜ್ಯ ಆಯೋಗದ ಶಿಫಾರಸುಗಳ ಮೇಲೆ ಕೈಗೊಂಡಿರುವ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮವನ್ನು ಮತ್ತು ಶಿಫಾರಸುಗಳನ್ನು ಅಂಗೀಕರಿಸದಿರುವುದಕ್ಕಾಗಿ ಕಾರಣಗಳೇನಾದರೂ ಇದ್ದರೆ ಆ ಕುರಿತ ಜ್ಞಾಪನಪತ್ರದೊಂದಿಗೆ ಮಂಡಿಸುವಂತೆ ಮಾಡತಕ್ಕದ್ದು.

29. ರಾಜ್ಯ ಆಯೋಗಗಳಿಗೆ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗಕ್ಕೆ ಸಂಬಂಧಿಸಿದ ಕೆಲವು ಉಪಬಂಧಗಳ ಅನ್ವಯ:- 9, 10, 12, 13, 14, 15, 16, 17 ಮತ್ತು 18ನೇ ಪ್ರಕರಣಗಳ ಉಪಬಂಧಗಳು ರಾಜ್ಯ ಆಯೋಗಕ್ಕೆ ಅನ್ವಯವಾಗತಕ್ಕದ್ದು ಮತ್ತು ಈ ಕೆಳಕಂಡ ಮಾರ್ಪಾಟುಗಳಿಗೊಳಪಟ್ಟು ಪರಿಣಾಮಕಾರಿಯಾಗತಕ್ಕದ್ದು, ಎಂದರೆ:-

(ಎ) “ ಆಯೋಗಕ್ಕೆ ” ಮಾಡಿದ ಉಲ್ಲೇಖಗಳನ್ನು “ ರಾಜ್ಯ ಆಯೋಗ ” ಕ್ಕೆ ಮಾಡಿದ ಉಲ್ಲೇಖಗಳೆಂಬುದಾಗಿ ಅರ್ಥೈಸತಕ್ಕದ್ದು;

(ಬಿ) 10ನೇ ಪ್ರಕರಣದ (3)ನೇ ಉಪ ಪ್ರಕರಣದಲ್ಲಿನ “ ಮಹಾ ಕಾರ್ಯದರ್ಶಿ ” ಎಂಬ ಪದಕ್ಕೆ ಬದಲಾಗಿ “ ಕಾರ್ಯದರ್ಶಿ” ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು;

(ಸಿ) 12ನೇ ಪ್ರಕರಣದಲ್ಲಿನ (ಎಫ್) ಖಂಡವನ್ನು ಬಿಟ್ಟುಬಿಡತಕ್ಕದ್ದು;

(ಡಿ) 17ನೇ ಪ್ರಕರಣದ (1)ನೇ ಖಂಡದಲ್ಲಿನ “ ಕೇಂದ್ರ ಸರ್ಕಾರ ಅಥವಾ ಯಾವುದೇ ” ಎಂಬ ಪದಗಳನ್ನು ಬಿಟ್ಟುಬಿಡತಕ್ಕದ್ದು.

## ಅಧ್ಯಾಯ - VI

### ಮಾನವ ಹಕ್ಕುಗಳ ನ್ಯಾಯಾಲಯಗಳು

30. ಮಾನವ ಹಕ್ಕುಗಳ ನ್ಯಾಯಾಲಯಗಳು:- ಮಾನವ ಹಕ್ಕುಗಳ ಉಲ್ಲಂಘನೆಯಿಂದ ಉದ್ಭವಿಸುವ ಅಪರಾಧಗಳನ್ನು ತ್ವರಿತವಾಗಿ ವಿಚಾರಣೆ ನಡೆಸುವ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಯ ಸಹಮತಿಯೊಂದಿಗೆ ಅಧಿಸೂಚನೆ ಹೊರಡಿಸಿ ಸದರಿ ಅಪರಾಧಗಳ ವಿಚಾರಣೆಗಾಗಿ ಪ್ರತಿ ಜಿಲ್ಲೆಗೆ ಮಾನವ ಹಕ್ಕುಗಳ ನ್ಯಾಯಾಲಯವೆಂದು ಒಂದು ಸೆಷನ್ಸ್ ನ್ಯಾಯಾಲಯವನ್ನು ನಿರ್ದಿಷ್ಟಪಡಿಸಬಹುದು:

ಪರಂತು, ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನ ಮೇರೆಗೆ ಅಂಥ ಅಪರಾಧಗಳ ವಿಚಾರಣೆಗಾಗಿ-

(ಎ) ಸೆಷನ್ಸ್ ನ್ಯಾಯಾಲಯವು ಈಗಾಗಲೇ ವಿಶೇಷ ನ್ಯಾಯಾಲಯವೆಂಬುದಾಗಿ ನಿರ್ದಿಷ್ಟಗೊಂಡಿದ್ದರೆ; ಅಥವಾ

(ಬಿ) ಈಗಾಗಲೇ ವಿಶೇಷ ನ್ಯಾಯಾಲಯವು ರಚಿತವಾಗಿದ್ದರೆ

- ಈ ಪ್ರಕರಣದಲ್ಲಿರುವುದು ಯಾವುದೂ ಅನ್ವಯವಾಗತಕ್ಕದ್ದಲ್ಲ.

31. ವಿಶೇಷ ಸರ್ಕಾರಿ ಪ್ರಾಸಿಕ್ಯೂಟರ್:- ಮಾನವ ಹಕ್ಕುಗಳ ಪ್ರತಿಯೊಂದು ನ್ಯಾಯಾಲಯಕ್ಕೆ, ರಾಜ್ಯ ಸರ್ಕಾರವು ಅಧಿಸೂಚನೆ ಹೊರಡಿಸಿ ಆ ನ್ಯಾಯಾಲಯದಲ್ಲಿ ಮೊಕದ್ದಮೆಗಳನ್ನು ನಡೆಸುವ ಉದ್ದೇಶಕ್ಕಾಗಿ ವಿಶೇಷ ಸರ್ಕಾರಿ ಪ್ರಾಸಿಕ್ಯೂಟರನಾಗಿ ಸರ್ಕಾರಿ ಪ್ರಾಸಿಕ್ಯೂಟರನನ್ನು ನಿರ್ದಿಷ್ಟಪಡಿಸತಕ್ಕದ್ದು ಅಥವಾ ಏಳು ವರ್ಷಗಳಿಗಿಂತ ಕಡಿಮೆಯಲ್ಲದಷ್ಟು ಅವಧಿಯವರೆಗೆ ನ್ಯಾಯವಾದಿಯಾಗಿ ವೃತ್ತಿ ನಡೆಸುತ್ತಿರುವ ಒಬ್ಬ ನ್ಯಾಯವಾದಿಯನ್ನು ನೇಮಿಸತಕ್ಕದ್ದು.

## ಅಧ್ಯಾಯ - VII

### ಹಣಕಾಸು, ಲೆಕ್ಕಪತ್ರಗಳು ಮತ್ತು ಲೆಕ್ಕಪರಿಶೋಧನೆ

32. ಕೇಂದ್ರ ಸರ್ಕಾರದಿಂದ ಅನುದಾನಗಳು:- (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕಾಗಿ ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಹಣದ ಮೊತ್ತಗಳನ್ನು ಈ ಸಂಬಂಧದಲ್ಲಿ ಸಂಸತ್ತು ಕಾನೂನಿನ ಮೂಲಕ ಸಂಸತ್ತಿನಿಂದ ಕ್ರಮಬದ್ಧವಾಗಿ ಧನ ವಿನಿಯೋಗ ಮಾಡಿದ ನಂತರ, ಅನುದಾನದ ರೂಪದಲ್ಲಿ ಆಯೋಗಕ್ಕೆ ಸಂದಾಯ ಮಾಡತಕ್ಕದ್ದು.

(2) ಆಯೋಗವು ಈ ಅಧಿನಿಯಮದ ಮೇರೆಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ತಾನು ಸೂಕ್ತವೆಂದು ಪರಿಗಣಿಸುವಂಥ ಮೊತ್ತಗಳನ್ನು ವೆಚ್ಚ ಮಾಡಬಹುದು ಮತ್ತು ಅಂಥ ಮೊತ್ತಗಳನ್ನು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅನುದಾನಗಳಿಂದ ಸಂದಾಯ ಮಾಡತಕ್ಕ ವೆಚ್ಚಗಳೆಂಬುದಾಗಿ ಪರಿಗಣಿಸತಕ್ಕದ್ದು.

33. ರಾಜ್ಯ ಸರ್ಕಾರದಿಂದ ಅನುದಾನಗಳು:- (1) ರಾಜ್ಯ ಸರ್ಕಾರವು ಈ ಅಧಿನಿಯಮದ ಉದ್ದೇಶಗಳಿಗೆ ಬಳಸಿಕೊಳ್ಳುವುದಕ್ಕಾಗಿ ತಾನು ಸೂಕ್ತವೆಂದು ಪರಿಗಣಿಸಬಹುದಾದಂಥ ಹಣದ ಮೊತ್ತಗಳನ್ನು ಈ ಸಂಬಂಧದಲ್ಲಿ ವಿಧಾನಮಂಡಲವು ಕಾನೂನಿನ ಮೂಲಕ ವಿಧಾನ ಮಂಡಲದಿಂದ ಕ್ರಮಬದ್ಧವಾಗಿ ಧನವಿನಿಯೋಗ ಮಾಡಿದ ನಂತರ ಅನುದಾನದ ರೂಪದಲ್ಲಿ ರಾಜ್ಯ ಆಯೋಗಕ್ಕೆ ಸಂದಾಯ ಮಾಡತಕ್ಕದ್ದು.

(2) ರಾಜ್ಯ ಆಯೋಗವು Vನೇ ಅಧ್ಯಾಯದ ಮೇರೆಗೆ ತನ್ನ ಕರ್ತವ್ಯಗಳನ್ನು ನಿರ್ವಹಿಸುವುದಕ್ಕಾಗಿ ಸೂಕ್ತವೆಂದು ಪರಿಗಣಿಸುವಂಥ ಮೊತ್ತಗಳನ್ನು ವೆಚ್ಚ ಮಾಡಬಹುದು ಮತ್ತು ಅಂಥ ಮೊತ್ತಗಳನ್ನು (1)ನೇ ಉಪ-ಪ್ರಕರಣದಲ್ಲಿ ಉಲ್ಲೇಖಿಸಲಾದ ಅನುದಾನಗಳಿಂದ ಸಂದಾಯ ಮಾಡತಕ್ಕ ವೆಚ್ಚಗಳೆಂಬುದಾಗಿ ಪರಿಗಣಿಸತಕ್ಕದ್ದು.

34. ಲೆಕ್ಕ ಪತ್ರಗಳು ಮತ್ತು ಲೆಕ್ಕ ಪರಿಶೋಧನೆ:- (1) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ, ಕೇಂದ್ರ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ಆಯೋಗವು ಯಥೋಚಿತ ಲೆಕ್ಕಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ತಯಾರಿಸತಕ್ಕದ್ದು.

(2) ಆಯೋಗದ ಲೆಕ್ಕಪತ್ರಗಳನ್ನು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ವಹಿಸಲಾದ ಯಾವುದೇ ವೆಚ್ಚವನ್ನು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನಿಗೆ ಆಯೋಗವು ಸಂದಾಯ ಮಾಡತಕ್ಕದ್ದು.

(3) ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಮತ್ತು ಈ ಅಧಿನಿಯಮದ ಮೇರೆಗೆ ಆಯೋಗದ ಲೆಕ್ಕ ಪತ್ರಗಳ

ಪರಿಶೋಧನೆಗೆ ಸಂಬಂಧಿಸಿದಂತೆ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕ ಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಮತ್ತು ಪ್ರಾಧಿಕಾರವನ್ನು ಅಂಥ ಲೆಕ್ಕಪರಿಶೋಧನೆಗೆ ಸಂಬಂಧಿಸಿ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಆಯೋಗದ ಪುಸ್ತಕಗಳು, ಲೆಕ್ಕಪತ್ರಗಳು, ಸಂಬಂಧಪಟ್ಟ ವೋಚರುಗಳು ಮತ್ತು ಇತರ ದಸ್ತಾವೇಜುಗಳು ಮತ್ತು ಕಾಗದ ಪತ್ರಗಳನ್ನು ಹಾಜರುಪಡಿಸುವಂತೆ ಕೋರುವ ಮತ್ತು ಆಯೋಗದ ಯಾವುದೇ ಕಚೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಅಥವಾ ಈ ಸಂಬಂಧದಲ್ಲಿ ಅವನಿಂದ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ಆಯೋಗದ ಲೆಕ್ಕ ಪತ್ರಗಳನ್ನು ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ಆಯೋಗವು ವರ್ಷಕ್ಕೊಮ್ಮೆ ಕೇಂದ್ರ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ಕೇಂದ್ರ ಸರ್ಕಾರವು ಲೆಕ್ಕ ಪರಿಶೋಧನಾ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡುವಂತೆ ಮಾಡತಕ್ಕದ್ದು.

35. ರಾಜ್ಯ ಆಯೋಗದ ಲೆಕ್ಕ ಪತ್ರಗಳು ಮತ್ತು ಲೆಕ್ಕಪರಿಶೋಧನೆ:- (1) ಭಾರತದ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನೊಂದಿಗೆ ಸಮಾಲೋಚಿಸಿ, ರಾಜ್ಯ ಸರ್ಕಾರವು ನಿಯಮಿಸಬಹುದಾದಂಥ ನಮೂನೆಯಲ್ಲಿ ರಾಜ್ಯ ಆಯೋಗವು ಯಥೋಚಿತ ಲೆಕ್ಕ ಪತ್ರಗಳನ್ನು ಮತ್ತು ಇತರ ಸುಸಂಬದ್ಧ ದಾಖಲೆಗಳನ್ನು ಇಡತಕ್ಕದ್ದು ಮತ್ತು ಲೆಕ್ಕಪತ್ರಗಳ ವಾರ್ಷಿಕ ವಿವರಣೆಯನ್ನು ತಯಾರಿಸತಕ್ಕದ್ದು.

(2) ರಾಜ್ಯ ಆಯೋಗದ ಲೆಕ್ಕಪತ್ರಗಳನ್ನು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ತಾನು ನಿರ್ದಿಷ್ಟಪಡಿಸಬಹುದಾದಂಥ ಮಧ್ಯಂತರಗಳಲ್ಲಿ ಲೆಕ್ಕ ಪರಿಶೋಧನೆ ಮಾಡತಕ್ಕದ್ದು ಮತ್ತು ಅಂಥ ಲೆಕ್ಕ ಪರಿಶೋಧನೆಯ ಸಂಬಂಧದಲ್ಲಿ ವಹಿಸಲಾದ ಯಾವುದೇ ವೆಚ್ಚವನ್ನು ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕಪರಿಶೋಧಕನಿಗೆ ರಾಜ್ಯ ಆಯೋಗವು ಸಂದಾಯ ಮಾಡತಕ್ಕದ್ದು.

(3) ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಮತ್ತು ಈ ಅಧಿನಿಯಮದ ಮೇರೆಗೆ ರಾಜ್ಯ ಆಯೋಗದ ಲೆಕ್ಕ ಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಅವನಿಂದ ನೇಮಕಗೊಂಡ ಯಾರೇ ವ್ಯಕ್ತಿಯು, ಸರ್ಕಾರಿ ಲೆಕ್ಕಪತ್ರಗಳ ಪರಿಶೋಧನೆಗೆ ಸಂಬಂಧಿಸಿದಂತೆ ಸಾಮಾನ್ಯವಾಗಿ ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕನು ಹೊಂದಿರುವಂಥವೇ ಹಕ್ಕುಗಳು ಮತ್ತು ವಿಶೇಷಾಧಿಕಾರಗಳು ಮತ್ತು ಅಧಿಕಾರವನ್ನು ಅಂಥ ಲೆಕ್ಕ ಪರಿಶೋಧನೆಗೆ ಸಂಬಂಧಿಸಿ ಹೊಂದಿರತಕ್ಕದ್ದು ಮತ್ತು ವಿಶೇಷವಾಗಿ, ಮತ್ತು ಇತರ ದಸ್ತಾವೇಜುಗಳು ಮತ್ತು ಕಾಗದಪತ್ರಗಳನ್ನು ಹಾಜರುಪಡಿಸುವಂತೆ ಕೋರುವ ಮತ್ತು ರಾಜ್ಯ ಆಯೋಗದ ಯಾವುದೇ ಕಛೇರಿಯನ್ನು ಪರಿಶೀಲಿಸುವ ಹಕ್ಕನ್ನು ಹೊಂದಿರತಕ್ಕದ್ದು.

(4) ಲೆಕ್ಕ ನಿಯಂತ್ರಕ ಮತ್ತು ಮಹಾಲೆಕ್ಕ ಪರಿಶೋಧಕರು ಅಥವಾ ಈ ಸಂಬಂಧದಲ್ಲಿ ಅವರಿಂದ ನೇಮಕಗೊಂಡ ಇತರ ಯಾರೇ ವ್ಯಕ್ತಿಯು ಪ್ರಮಾಣೀಕರಿಸಿದ ರಾಜ್ಯ ಆಯೋಗದ ಲೆಕ್ಕಪತ್ರಗಳನ್ನು, ಅವುಗಳ ಮೇಲಿನ ಲೆಕ್ಕಪರಿಶೋಧನಾ ವರದಿಯೊಂದಿಗೆ ರಾಜ್ಯ ಆಯೋಗವು ವರ್ಷಕ್ಕೊಮ್ಮೆ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಲೆಕ್ಕ ಪರಿಶೋಧನಾ ವರದಿಯನ್ನು ಸ್ವೀಕರಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ರಾಜ್ಯ ವಿಧಾನ ಮಂಡಲದ ಮುಂದೆ ಇಡುವಂತೆ ಮಾಡತಕ್ಕದ್ದು.

## ಅಧ್ಯಾಯ - VIII

### ಸಂಕೀರ್ಣ

36. ಆಯೋಗದ ಅಧಿಕಾರ ವ್ಯಾಪ್ತಿಗೆ ಒಳಪಡದ ವಿಷಯಗಳು:- (1) ಆಯೋಗವು, ರಾಜ್ಯ ಆಯೋಗದ ಮುಂದೆ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಕ್ರಮಬದ್ಧವಾಗಿ ರಚಿತವಾದ ಯಾವುದೇ ಇತರ ಆಯೋಗದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ವಿಷಯದ ಬಗ್ಗೆ ವಿಚಾರಣೆಯನ್ನು ನಡೆಸತಕ್ಕದಲ್ಲ.

(2) ಆಯೋಗವು ಅಥವಾ ರಾಜ್ಯ ಆಯೋಗವು, ಮಾನವ ಹಕ್ಕುಗಳ ಉಲ್ಲಂಘನೆಯಾಗುವ ಕೃತ್ಯವನ್ನು ಮಾಡಲಾಗಿದೆಯೆಂದು ಆಪಾದಿಸಲಾದ ದಿನಾಂಕದಿಂದ ಒಂದು ವರ್ಷ ಮುಕ್ತಾಯವಾದ ತರುವಾಯ ಅಂಥ ಯಾವುದೇ ವಿಚಾರಣೆಯನ್ನು ನಡೆಸತಕ್ಕದ್ದಲ್ಲ.

37. ವಿಶೇಷ ತನಿಖಾ ತಂಡಗಳ ರಚನೆ:- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರ ಕಾನೂನಿನಲ್ಲಿ ಏನೇ ಇದ್ದರೂ, ಮಾನವ ಹಕ್ಕುಗಳ ಉಲ್ಲಂಘನೆಯಿಂದ ಉದ್ಭವಿಸುವ ಅಪರಾಧಗಳ ತನಿಖೆ ಮತ್ತು ಪ್ರಾಸಿಕ್ಯೂಷನ್ ನಡೆಸುವ ಉದ್ದೇಶಗಳಿಗಾಗಿ ತಾನು ಅವಶ್ಯವೆಂದು ಭಾವಿಸುವಂಥ ಪೊಲೀಸ್ ಅಧಿಕಾರಿಗಳನ್ನೊಳಗೊಂಡ ಒಂದು ಅಥವಾ ಹೆಚ್ಚು ವಿಶೇಷ ತನಿಖಾ ತಂಡಗಳನ್ನು ರಚಿಸುವುದು ಅವಶ್ಯವೆಂದು ಸರ್ಕಾರವು ಪರ್ಯಾಲೋಚಿಸಿದರೆ, ಅದು ಹಾಗೆ ರಚಿಸಬಹುದು.

38. ಸದ್ಭಾವನೆಯಿಂದ ಕೈಗೊಂಡ ಕ್ರಮದ ರಕ್ಷಣೆ:- ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಆಯೋಗದ, ರಾಜ್ಯ ಆಯೋಗದ

ಅಥವಾ ಅದರ ಯಾರೇ ಸದಸ್ಯನ ಅಥವಾ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಆಯೋಗದ ಅಥವಾ ರಾಜ್ಯ ಆಯೋಗದ ನಿರ್ದೇಶನದ ಮೇರೆಗೆ ಕಾರ್ಯನಿರ್ವಹಿಸುವ ಯಾರೇ ವ್ಯಕ್ತಿಯ ವಿರುದ್ಧ ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಲಾದ ಯಾವುವೇ ನಿಯಮಗಳ ಅಥವಾ ಆದೇಶಗಳ ಅನುಸಾರವಾಗಿ ಅವನು ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಅಥವಾ ಕೇಂದ್ರ ಸರ್ಕಾರದ, ರಾಜ್ಯ ಸರ್ಕಾರದ, ಆಯೋಗದ ಅಥವಾ ರಾಜ್ಯ ಆಯೋಗದ ಅಧಿಕಾರದ ಮೂಲಕ ಅಥವಾ ಅದರ ಮೇರೆಗೆ ಪ್ರಕಟವಾದ ಯಾವುದೇ ವರದಿ, ಪತ್ರ ಅಥವಾ ವ್ಯವಹರಣೆಗಳ ಬಗ್ಗೆ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

39. ಸದಸ್ಯರು ಮತ್ತು ಅಧಿಕಾರಿಗಳು ಲೋಕ ನೌಕರರಾಗಿರುವುದು:- ಆಯೋಗದ, ರಾಜ್ಯ ಆಯೋಗದ ಪ್ರತಿಯೊಬ್ಬ ಸದಸ್ಯನನ್ನು ಮತ್ತು ಈ ಅಧಿನಿಯಮದ ಮೇರೆಗಿನ ಪ್ರಕಾರ್ಯಗಳನ್ನು ಚಲಾಯಿಸಲು ಆಯೋಗವು ಅಥವಾ ರಾಜ್ಯ ಆಯೋಗವು ನೇಮಿಸಿದ ಅಥವಾ ಅಧಿಕೃತಗೊಳಿಸಿದ ಪ್ರತಿಯೊಬ್ಬ ಅಧಿಕಾರಿಯನ್ನು ಭಾರತ ದಂಡ ಸಂಹಿತೆ (1860ರ 45)ಯ 21ನೇ ಪ್ರಕರಣದ ಅರ್ಥ ವ್ಯಾಪ್ತಿಯಲ್ಲಿ ಲೋಕ ನೌಕರರೆಂದು ಭಾವಿಸತಕ್ಕದ್ದು.

40. ಕೇಂದ್ರ ಸರ್ಕಾರದ ನಿಯಮ ರಚನಾಧಿಕಾರ:- (1) ಕೇಂದ್ರ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಮೇಲೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲ ಅಥವಾ ಅವುಗಳ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 8ನೇ ಪ್ರಕರಣದ ಮೇರೆಗೆ ಸದಸ್ಯರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) ಇತರ ಆಡಳಿತಾತ್ಮಕ, ತಾಂತ್ರಿಕ ಮತ್ತು ವೈಜ್ಞಾನಿಕ ಸಿಬ್ಬಂದಿಯನ್ನು ಆಯೋಗವು ಯಾವ ಷರತ್ತುಗಳಿಗೆ ಒಳಪಟ್ಟು ನೇಮಿಸಬಹುದೋ ಆ ಷರತ್ತುಗಳು ಮತ್ತು 11ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಸಂಬಳಗಳು ಮತ್ತು ಭತ್ಯೆಗಳು;

(ಸಿ) 13ನೇ ಪ್ರಕರಣದ (1)ನೇ ಉಪಪ್ರಕರಣದ (ಎಫ್) ಖಂಡದ ಮೇರೆಗೆ ನಿಯಮಿಸಲು ಅಗತ್ಯವಾದ ಸಿವಿಲ್ ನ್ಯಾಯಾಲಯದ ಯಾವುದೇ ಇತರ ಅಧಿಕಾರ;

(ಡಿ) 34ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ಆಯೋಗವು ತಯಾರಿಸಬೇಕಾದ ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರದ ನಮೂನೆ; ಮತ್ತು

(ಇ) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಯಾವುದೇ ಇತರ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಅದನ್ನು ಹಾಗೆ ಇಡಲಾದ ಅಧಿವೇಶನದ ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಬೇಕೆಂದು ನಿಯಮವನ್ನು ರಚಿಸಬಾರದೆಂದು ಎರಡೂ ಸದನಗಳು ಒಪ್ಪಿದರೆ ಆ ತರುವಾಯ, ಆ ನಿಯಮವು, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

40ಎ. ಪೂರ್ವಾನ್ವಯವಾಗಿ ನಿಯಮಗಳನ್ನು ರಚಿಸಲು ಅಧಿಕಾರ:- 40ನೇ ಪ್ರಕರಣದ (2)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗೆ ನಿಯಮಗಳನ್ನು ರಚಿಸುವ ಅಧಿಕಾರವು, ಈ ಅಧಿನಿಯಮವು ರಾಷ್ಟ್ರಪತಿಯ ಸಮ್ಮತಿ ಪಡೆದ ದಿನಾಂಕಕ್ಕಿಂತ ಮುಂಚಿತವಲ್ಲದ ದಿನಾಂಕದಿಂದ ಪೂರ್ವಾನ್ವಯವಾಗಿ, ಅಂಥ ನಿಯಮಗಳನ್ನು ಅಥವಾ ಅವುಗಳ ಪೈಕಿ ಯಾವುದೇ ನಿಯಮವನ್ನು ರಚಿಸುವ ಅಧಿಕಾರವನ್ನು ಒಳಗೊಂಡಿರತಕ್ಕದ್ದು, ಆದರೆ ಅಂಥ ನಿಯಮವು ಯಾವ ವ್ಯಕ್ತಿಗೆ ಅನ್ವಯವಾಗಬಹುದಾಗಿದೆಯೋ ಆ ಯಾರೇ ವ್ಯಕ್ತಿಯ ಹಿತಾಸಕ್ತಿಗಳಿಗೆ ಪ್ರತಿಕೂಲ ಪರಿಣಾಮವುಂಟುಮಾಡುವಂಥ ಯಾವುದೇ ನಿಯಮವನ್ನು ಪೂರ್ವಾನ್ವಯವಾಗಿ ಜಾರಿಗೆ ನೀಡತಕ್ಕದ್ದಲ್ಲ.

41. ರಾಜ್ಯ ಸರ್ಕಾರದ ನಿಯಮ ರಚನಾಧಿಕಾರ:- (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯರೂಪಕ್ಕೆ ತರಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಅಂಥ ನಿಯಮಗಳು ಈ ಕೆಳಕಂಡ ಎಲ್ಲಾ ಅಥವಾ ಅವುಗಳ ಪೈಕಿ ಯಾವುದೇ ವಿಷಯದ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ:-

(ಎ) 26ನೇ ಪ್ರಕರಣದ ಮೇರೆಗೆ ಸದಸ್ಯರ ಸಂಬಳಗಳು ಮತ್ತು ಭತ್ಯೆಗಳು ಹಾಗೂ ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು;

(ಬಿ) ಇತರ ಆಡಳಿತಾತ್ಮಕ, ತಾಂತ್ರಿಕ ಮತ್ತು ವೈಜ್ಞಾನಿಕ ಸಿಬ್ಬಂದಿಯನ್ನು ಆಯೋಗವು ಯಾವ ಷರತ್ತುಗಳಿಗೆ ಒಳಪಟ್ಟು ನೇಮಿಸಬಹುದೋ ಆ ಷರತ್ತುಗಳು ಮತ್ತು 27ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಅಧಿಕಾರಿಗಳ ಮತ್ತು ಇತರ ಸಿಬ್ಬಂದಿಯ ಸಂಬಳಗಳು ಮತ್ತು ಭತ್ಯೆಗಳು;

(ಸಿ) 35ನೇ ಪ್ರಕರಣದ (1)ನೇ ಉಪಪ್ರಕರಣದ ಮೇರೆಗೆ ತಯಾರಿಸಬೇಕಾದ ಲೆಕ್ಕಪತ್ರಗಳ ವಾರ್ಷಿಕ ವಿವರ ಪತ್ರದ ನಮೂನೆ.

(3) ರಾಜ್ಯ ಸರ್ಕಾರವು ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲವು ಉಭಯ ಸದನಗಳನ್ನು ಹೊಂದಿದ್ದರೆ, ಅದರ ಪ್ರತಿಯೊಂದು ಸದನದ ಮುಂದೆ ಅಥವಾ ವಿಧಾನ ಮಂಡಲವು ಒಂದೇ ಸದನವನ್ನು ಹೊಂದಿರುವಲ್ಲಿ ಆ ಸದನದ ಮುಂದೆ ಇಡತಕ್ಕದ್ದು.

42. ತೊಂದರೆಗಳ ನಿವಾರಣಾಧಿಕಾರ:- (1) ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಆದೇಶ ಪ್ರಕಟಿಸುವ ಮೂಲಕ ತೊಂದರೆಯನ್ನು ನಿವಾರಿಸಲು ಅವಶ್ಯವೆಂದು ಅಥವಾ ಯುಕ್ತವೆಂದು ಕಂಡುಬರಬಹುದಾದಂಥ ಮತ್ತು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದಂಥ ಉಪಬಂಧಗಳನ್ನು ರಚಿಸಬಹುದು:

ಪರಂತು, ಈ ಅಧಿನಿಯಮದ ಪ್ರಾರಂಭದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಯಾವುದೇ ಆದೇಶವನ್ನು ಮಾಡತಕ್ಕದ್ದಲ್ಲ.

(2) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ಆದೇಶವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ ಅದನ್ನು ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಇಡತಕ್ಕದ್ದು.

43. ನಿರಸನ ಮತ್ತು ಉಳಿಸುವಿಕೆಗಳು:- (1) ಮಾನವ ಹಕ್ಕುಗಳ ರಕ್ಷಣಾ ಅಧ್ಯಾದೇಶ, 1993 (1993ರ 30) ಇದನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸಿತವಾಗಿದ್ದರೂ, ಸದರಿ ಅಧ್ಯಾದೇಶದ ಮೇರೆಗೆ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಸಂವಾದಿ ಉಪಬಂಧದ ಮೇರೆಗೆ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

* * * * *